# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## *ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕಃ 02-03-2017ರಂದು ನಡೆದ ಸಭೆಯ ನಡವಳಿಗಳು*

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| ಎಂ.ಕೆ.ಗುಣಶೇಖರ್ – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ಬಿ.ಎನ್.ನಿತೀಶ್ ಪುರುಶೋತ್ತಮ – ಸದಸ್ಯರು | ವಿಶೇಷ ಆಯುಕ್ತರು (ಹಣಕಾಸು), (ಯೋಜನೆ), |
| ಕೆ.ಎಂ.ಮಮತ – ಸದಸ್ಯರು | ಜಂಟಿ ಆಯುಕ್ತರು |
| ಜೆ.ಎನ್.ಶ್ರೀನಿವಾಸಮೂರ್ತಿ – ಸದಸ್ಯರು | ಮುಖ್ಯಲೆಕ್ಕಾಧಿಕಾರಿ, ಮುಖ್ಯ ಆರ್ಥಿಕ ಅಧಿಕಾರಿ, |
| ಎಂ.ಮಹದೇವ – ಸದಸ್ಯರು | ಜಂಟಿ/ಉಪ ನಿರ್ದೇಶಕರು (ಸಾಂಖ್ಯಿಕ), |
| ಪದ್ಮಾವತಿ ನರಸಿಂಹಮೂರ್ತಿ – ಸದಸ್ಯರು | ವಿದ್ಯಾಧಿಕಾರಿ |
| ಮಮತ ಕೆ.ಬಿ. ವಾಸುದೇವ – ಸದಸ್ಯರು | ಕಾರ್ಯಪಾಲಕ ಅಭಿಯಂತರರು |
| ಎಂ.ಪದ್ಮಾವತಿ ಶ್ರೀನಿವಾಸ್ – ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು |
| ಎನ್.ಲೋಕೇಶ್ – ಸದಸ್ಯರು | ಸಂಬಂಧಪಟ್ಟ ಅಧಿಕಾರಿಗಳು |
| ಎಂ. ಶಶಿರೇಖಾ – ಸದಸ್ಯರು | --- |
| ಬಿ.ಸುಮಂಗಲ – ಸದಸ್ಯರು | --- |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

### *01]. ವಿಷಯದ ಸಂಖ್ಯೆಃ ತೆಆಸ್ಥಾಸ/50/2016-17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 01-08-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 2015-16 ನೇ ಸಾಲಿನ ಆಯವ್ಯಯದಲ್ಲಿ ಬಿಬಿಎಂಪಿಗೆ ಘೋಷಿಸಿರುವ ರೂ. 1500.00 ಕೋಟಿಗಳ ಅನುದಾನದ ಪೈಕಿ ಸರ್ಕಾರದ ಆದೇಶ ಸಂಖ್ಯೆ : ನಅಇ 279 ಎಸ್.ಎಫ್.ಸಿ 2015, ಬೆಂಗಳೂರು ದಿನಾಂಕ : 08.01.2016 ರಲ್ಲಿ ರೂ. 976.00 ಕೋಟಿಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡಿದೆ. ಅದರಲ್ಲಿ ಕ್ರ.ಸಂ 1 ರಲ್ಲಿ ಬೆಂಗಳೂರು ನಗರದಲ್ಲಿ ಘನತ್ಯಾಜ್ಯ ಸಂಸ್ಕರಣ ಘಟಕಗಳ ಕಾರ್ಯಾರಂಭಕ್ಕೆ ರೂ. 200.00 ಕೋಟಿಗಳ ಅನುದಾನ ನಿಗಧಿಪಡಿಸಿದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 238 ಎಸ್.ಎಫ್.ಸಿ 2016, ಬೆಂಗಳೂರು ದಿನಾಂಕ: 18-06-2016 ರಲ್ಲಿ ಮೇಲ್ಕಂಡ ರೂ. 200.00 ಕೋಟಿಗಳಲ್ಲಿ ವಾರ್ಡ್ ಸಂಖ್ಯೆ 40ರ ದೊಡ್ಡಬಿದರಕಲ್ಲು ಘಟಕ, ವಾರ್ಡ್ 198ರ ಲಿಂಗಧೀರನಹಳ್ಳಿ ಘಟಕ, ಸುಬ್ಬರಾಯನ ಪಾಳ್ಯ ಘಟಕ, ಸೀಗೆಹಳ್ಳಿ, ಕನ್ನಹಳ್ಳಿ ಘಟಕಗಳ ಒಟ್ಟು 32 ಕಾಮಗಾರಿಗಳ ಅಂದಾಜು ಮೊತ್ತ ರೂ. 66.00 ಕೋಟಿಗಳಿಗೆ ನಗರೋತ್ಥಾನ ಯೋಜನೆಯ ಲೆಕ್ಕಶೀರ್ಷಿಕೆ ಅಡಿ ಭರಿಸಲು ಅನುಮೋದನೆ ನೀಡಿದೆ. ನಗರೋತ್ಥಾನ ಯೋಜನೆಯ ಕಾಮಗಾರಿಗಳನ್ನು 2016-17ರ ಲೆಕ್ಕಶೀರ್ಷಿಕೆ "P-3106 ನಗರೋತ್ಥಾನ ಕಾಮಗಾರಿಗಳು" Current Works ಅಡಿ ಜಾಬ್‌ಸಂಖ್ಯೆ ನೀಡಬೇಕಿದೆ. ಕಾಮಗಾರಿಗಳಿಗೆ ಜಾಬ್‌ಸಂಖ್ಯೆ ನೀಡಲು ಮಾನ್ಯ ಆಯುಕ್ತರು ಆದೇಶಿಸಿರುತ್ತಾರೆ. 2016-17ರ ಆಯವ್ಯಯದಲ್ಲಿ (ಪುಟಸಂಖ್ಯೆ 184) ಲೆಕ್ಕಶೀರ್ಷಿಕೆ P-3106ನ CurrentWorks ಅಡಿ ಅನುದಾನ ಮೀಸಲಿರಿಸಿರುವುದಿಲ್ಲ. ಸರ್ಕಾರದ ಅನುಮೋದನೆಯಂತೆ ಕಾಮಗಾರಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಮದ ತುರ್ತಾಗಿ ಕೈಗೊಳ್ಳಬೇಕಿದೆ. ಆಯವ್ಯಯದಲ್ಲಿ ಅನುದಾನ ಮೀಸಲಿರಿಸದ ಕಾರಣ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ 32 ಕಾಮಗಾರಿಗಳ ಮೊತ್ತ ರೂ.6600.00 ಲಕ್ಷಗಳ ಅನುದಾನವನ್ನು

2016–17ರ ಲೆಕ್ಕಶೀರ್ಷಿಕೆ P–3106ನ Current Works ಅಡಿ ಅಳವಡಿಸಿಕೊಂಡು 310–17–000026 ರಿಂದ 310–17–000057 ರವರೆಗೆ ಜಾಬ್‌ಸಂಖ್ಯೆ ನೀಡಲಾಗಿದೆ. ಘಟನೋತ್ತರ ಮಂಜೂರಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***–ಮುಂದೂಡಿದೆ–***

### ***02]. ವಿಷಯದ ಸಂಖ್ಯೆ: ತೆಆಸ್ಥಾಸ/56/2016–17***

ಜಂಟಿ ಆಯುಕ್ತರು (ಆರೋಗ್ಯ) ರವರ ದಿನಾಂಕ: 22.08.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಜಂಟಿ ಆಯುಕ್ತರು (SWM) ರವರು ಕೋಗಿಲು–ಕಣ್ಣೂರು ಮುಖ್ಯರಸ್ತೆಯಿಂದ ಬೆಳ್ಳಹಳ್ಳಿ ವೈಜ್ಞಾನಿಕ ಘನತ್ಯಾಜ್ಯ ವಿಲೇವಾರಿ ಘಟಕಗಳಿಗೆ ಪರ್ಯಾಯ ರಸ್ತೆ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತ ರೂ. 204.00 ಲಕ್ಷಗಳಿಗೆ ಕೇಂದ್ರ ಸರ್ಕಾರದ ಯೋಜನೆ **ಸ್ವಚ್ಛ ಭಾರತ್ ಮಿಷನ್** ಅಡಿಯಲ್ಲಿ ಬಿಡುಗಡೆಯಾಗಿರುವ **ರೂ. 41.15 ಕೋಟಿಗಳಲ್ಲಿ** ಜಾಬ್‌ಸಂಖ್ಯೆ ನೀಡಲು ಕೋರಿರುತ್ತಾರೆ. ಸದರಿ ಮೊತ್ತಕ್ಕೆ ಕ್ರಿಯಾಯೋಜನೆ ಲಭ್ಯವಿಲ್ಲದ ಬಗ್ಗೆ ಚರ್ಚಿಸಲಾಗಿ, ಅವಶ್ಯಕತೆಗೆ ಅನುಗುಣವಾಗಿ SWM ಕಾಮಗಾರಿ ಕೈಗೊಳ್ಳಬೇಕಿರುವುದರಿಂದ ಸದರಿ ಮೊತ್ತಕ್ಕೆ ಕ್ರಿಯಾಯೋಜನೆ ಸಿದ್ದಪಡಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಮಾನ್ಯ ಆಯುಕ್ತರು ಕಾಮಗಾರಿ ಕೈಗೊಳ್ಳಲು ಜಾಬ್‌ಸಂಖ್ಯೆ ನೀಡಲು ಅನುಮೋದನೆ ನೀಡಿರುತ್ತಾರೆ.

2016–17ರ ಆಯವ್ಯಯದ (ಪುಟಸಂಖ್ಯೆ–180) ರಲ್ಲಿ ಕೇಂದ್ರ ಸರ್ಕಾರದ ಅನುದಾನದ ಕಾಮಗಾರಿಗಳು– ಸ್ವಚ್ಛ ಭಾರತ್ ಅಭಿಯಾನದ ಕಾಮಗಾರಿಗಳು ಪಿ–3112 ಅಡಿ ರೂ. 150.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು, ರೂ. 41.15 ಕೋಟಿ ಅನುದಾನವನ್ನು ಈಗಾಗಲೆ ಬಿಡುಗಡೆಗೊಳಿಸಿರುವುದರಿಂದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ, ಲೆಕ್ಕಶೀರ್ಷಿಕೆ ಪಿ–3112 ಅಡಿ ರೂ. 49.88 ಲಕ್ಷಗಳ ಅನುದಾನವನ್ನು ಅಳವಡಿಸಿಕೊಂಡು ರೂ. 199.88 ಲಕ್ಷಗಳಿಗೆ ಈಗಾಗಲೇ ಜಾಬ್‌ಸಂಖ್ಯೆ ನೀಡಲಾಗಿರುತ್ತದೆ. ಸದರಿ ಪ್ರಸ್ತಾವನೆ ಮೊತ್ತ ರೂ. 204.00 ಲಕ್ಷಗಳಾಗಿದ್ದು, ಜಾಬ್‌ಸಂಖ್ಯೆ ನೀಡಲು ರೂ. 204.00 ಲಕ್ಷಗಳ ಅನುದಾನದ ಕೊರತೆ ಇರುತ್ತದೆ. ಆಯವ್ಯಯದಲ್ಲಿ ಕೊರತೆ ಅನುದಾನಕ್ಕೆ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ಈಗಾಗಲೇ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ರೂ. 41.15 ಕೋಟಿ ಅನುದಾನ ಬಿಡುಗಡೆಗೊಳಿಸಿರುವುದರಿಂದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ ಲೆಕ್ಕಶೀರ್ಷಿಕೆ ಪಿ–3112 ಅಡಿ ರೂ. 204.00 ಲಕ್ಷಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ರೂ. 204.00 ಲಕ್ಷಗಳಿಗೆ 310–17–000058 ಜಾಬ್‌ಸಂಖ್ಯೆ ನೀಡಲಾಗಿದೆ. ಘಟನೋತ್ತರ ಮಂಜೂರಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಜಂಟಿ ಆಯುಕ್ತರು (ಆರೋಗ್ಯ) ರವರ ದಿನಾಂಕ: 22.08.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

### ***03]. ವಿಷಯದ ಸಂಖ್ಯೆ: ತೆಆಸ್ಥಾಸ/92/2016–17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 22.11.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 163, ಸ್ವತ್ತಿನ ಸಂಖ್ಯೆ 228, 1ನೇ ಅಡ್ಡ ರಸ್ತೆ, 2ನೇ ಬ್ಲಾಕ್, 3ನೇ ಘಟ್ಟ, ಬಿ.ಎಸ್.ಕೆ 3 ನೇ ಹಂತ ಇಲ್ಲಿ ಅನಧಿಕೃತ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ಅಂದಾಜು ಮೊತ್ತ ರೂ. 1.00 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕಾ.ಪಾ.ಅ ಬಸವನಗುಡಿ ರವರು ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ವೆಚ್ಚವನ್ನು 2016–17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ.

ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳಬೇಕಿದೆ. ಅನುದಾನದ ವಿವರಗಳು ಈ ಕೆಳಕಂಡಂತಿದೆ.

| ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" Budget Book Page No. 111 (ರೂ. ಲಕ್ಷಗಳಲ್ಲಿ) | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯಂತೆ ಅನುದಾನ ಅಳವಡಿಸಿಕೊಂಡಿರುವ ಮೊತ್ತ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ತಾವನೆಯ ಮೊತ್ತ |
| **150.00** | **8.00** | **157.45** | **0.55** | **1.00** |

ಜಾಬ್‌ಸಂಖ್ಯೆ ನೀಡಲು ಪ್ರಸ್ತಾವನೆ ಸಲ್ಲಿಸಿರುವ ಮೊತ್ತ ರೂ. 1.00 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.55 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುವೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016-17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016-17ರ ಲೆಕ್ಕಶೀರ್ಷಿಕೆ ಪಿ-0055 ಅಡಿ ಕೊರತೆ ಅನುದಾನ ರೂ. 1.00 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುವ ಬಗ್ಗೆ ಪರಿಶೀಲಿಸಿ, ಸೂಕ್ತ ಸ್ಪಷ್ಟೀಕರಣದೊಂದಿಗೆ ಸಮಿತಿಯ ಮುಂದೆ ಮರುಮಂಡಿಸಲು ಕಡತವನ್ನು ಹಿಂದಿರುಗಿಸಲು ಸಮಿತಿಯು ತೀರ್ಮಾನಿಸಿತು.**

***04]. ವಿಷಯದ ಸಂಖ್ಯೆ: ತೆಆಸ್ಥಾಸ/94/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 23.11.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 155, ಸ್ವತ್ತಿನ ಸಂಖ್ಯೆ 44 (ಹಳೆಯ ಸಂಖ್ಯೆ 289/24), 4ನೇ ಕ್ರಾಸ್, ಜೆ.ಪಿ. ರಾಜರತ್ನಮ ರಸ್ತೆ, ಹನುಮಂತನಗರ ಇಲ್ಲಿ ಅನಧಿಕೃತ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ಅಂದಾಜು ಮೊತ್ತ ರೂ. 18.00 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕಾ.ಪಾ.ಅ ಬಸವನಗುಡಿ ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ವೆಚ್ಚವನ್ನು 2016-17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳಬೇಕಿದೆ. ಅನುದಾನದ ವಿವರಗಳು ಈ ಕೆಳಕಂಡಂತಿದೆ.

| ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" Budget Book Page No. 111 (ರೂ. ಲಕ್ಷಗಳಲ್ಲಿ) | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯಂತೆ ಅನುದಾನ ಅಳವಡಿಸಿಕೊಂಡಿರುವ ಮೊತ್ತ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ತಾವನೆಯ ಮೊತ್ತ |
| **150.00** | **8.00** | **157.45** | **0.55** | **18.00** |

ಜಾಬ್‌ಸಂಖ್ಯೆ ನೀಡಲು ಪ್ರಸ್ಥಾವನೆ ಸಲ್ಲಿಸಿರುವ ಮೊತ್ತ ರೂ. 18.00 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.55 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುವೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016–17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016–17ರ ಲೆಕ್ಕಶೀರ್ಷಿಕೆ ಪಿ–0055 ಅಡಿ ಕೊರತೆ ಅನುದಾನ ರೂ. 18.00 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುವ ಬಗ್ಗೆ ಪರಿಶೀಲಿಸಿ, ಸೂಕ್ತ ಸ್ಪಷ್ಟೀಕರಣದೊಂದಿಗೆ ಸಮಿತಿಯ ಮುಂದೆ ಮರುಮಂಡಿಸಲು ಕಡತವನ್ನು ಹಿಂದಿರುಗಿಸಲು ಸಮಿತಿಯು ತೀರ್ಮಾನಿಸಿತು.**

### ***05]. ವಿಷಯದ ಸಂಖ್ಯೆ: ತೆಆಸ್ಥಾಸ/98/2016–17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 25.10.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 140ರಲ್ಲಿ ಸ್ವತ್ತಿನ ಸಂಖ್ಯೆ 59, 6ನೇ ಅಡ್ಡ ರಸ್ತೆ, ಚಾಮರಾಜಪೇಟೆ, ಬೆಂಗಳೂರು ಇಲ್ಲಿ ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ಅಂದಾಜು ಮೊತ್ತ ರೂ. 6.00 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕಾ.ಪಾ.ಅ ಚಾಮರಾಜಪೇಟೆ' ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ/ ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳಬೇಕಿದೆ. ಸದರಿ ವೆಚ್ಚವನ್ನು 2016–17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಅನುದಾನದ ವಿವರಗಳು ಈ ಕೆಳಕಂಡಂತಿದೆ.

| ಲೆಕ್ಕಶೀರ್ಷಿಕೆ: **P- 0055 “Encroachment clearance Expenses ( Demolition charges)” Budget Book Page No. 111** (ರೂ. ಲಕ್ಷಗಳಲ್ಲಿ) | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ ಕಡತ ಸಲ್ಲಿಸಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ಥಾವನೆಯ ಮೊತ್ತ |
| **150.00** | **149.25** | **0.00** | **0.75** | **6.00** |

ಜಾಬ್‌ಸಂಖ್ಯೆ ನೀಡಲು ಪ್ರಸ್ಥಾವನೆ ಸಲ್ಲಿಸಿರುವ ಮೊತ್ತ ರೂ. 6.00 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.75 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ತೆರವುವೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ ಮಾನ್ಯ ಆಯುಕ್ತರ ಆದೇಶದಂತೆ ರೂ. 6.00 ಲಕ್ಷಗಳಿಗೆ 140–17–000006 ಜಾಬ್‌ಸಂಖ್ಯೆ ನೀಡಲಾಗಿದೆ. ಘಟನೋತ್ತರ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುವ ಬಗ್ಗೆ ಪರಿಶೀಲಿಸಿ, ಸೂಕ್ತ ಸ್ಪಷ್ಟೀಕರಣದೊಂದಿಗೆ ಸಮಿತಿಯ ಮುಂದೆ ಮರುಮಂಡಿಸಲು ಕಡತವನ್ನು ಹಿಂದಿರುಗಿಸಲು ಸಮಿತಿಯು ತೀರ್ಮಾನಿಸಿತು.**

## *06]. ವಿಷಯದ ಸಂಖ್ಯೆ: ತೆಆಸ್ಥಾಸ/101/2016-17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 21.12.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 29, ಕಾಚರಕನಹಳ್ಳಿ ವ್ಯಾಪ್ತಿಯಲ್ಲಿ ಬರುವ ಸ್ವತ್ತಿನ ಸಂಖ್ಯೆ 465ಡಿ, ಜಲವಾಯು ವಿಹಾರ್, ಕಲ್ಯಾಣ ನಗರ (ಪೋ), ಬೆಂಗಳೂರು ಇಲ್ಲಿ ಮಂಜೂರಾತಿ ಪಡೆಯದೇ ಅನದೀಕೃತವಾಗಿ ಮೇಲ್ಡಾವಣೆ ಜಾಗದಲ್ಲಿ ಕಟ್ಟಡ ನಿರ್ಮಿಸಿದ್ದು, ಅನಧಿಕೃತ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ಮೊತ್ತ ರೂ. 1.50 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕಾ.ಪಾ.ಅ (ಸರ್ವಜ್ಞನಗರ) ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವ ವೆಚ್ಚವನ್ನು 2016-17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳಬೇಕಿದೆ. 2016-17ರ ಆಯವ್ಯಯದ ಅನುದಾನದ ವಿವರಗಳು ಈ ಕೆಳಕಂಡಂತಿದೆ.

| ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" /Budget Book Page No. 111 (ರೂ. ಲಕ್ಷಗಳಲ್ಲಿ) | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯಂತೆ ಅನುದಾನ ಅಳವಡಿಸಿಕೊಂಡಿರುವ ಮೊತ್ತ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ತಾವನೆಯ ಮೊತ್ತ |
| **150.00** | **43.78** | **193.28** | **0.55** | **1.50** |

ಜಾಬ್‌ಸಂಖ್ಯೆ ನೀಡಲು ಪ್ರಸ್ಥಾವನೆ ಸಲ್ಲಿಸಿರುವ ಮೊತ್ತ ರೂ. 1.50 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.55 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುವೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016-17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016-17ರ ಲೆಕ್ಕಶೀರ್ಷಿಕೆ ಪಿ-0055 ಅಡಿ ಕೊರತೆ ಅನುದಾನ ರೂ. 1.50 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುವ ಬಗ್ಗೆ ಪರಿಶೀಲಿಸಿ, ಸೂಕ್ತ ಸ್ಪಷ್ಟೀಕರಣದೊಂದಿಗೆ ಸಮಿತಿಯ ಮುಂದೆ ಮರುಮಂಡಿಸಲು ಕಡತವನ್ನು ಹಿಂದಿರುಗಿಸಲು ಸಮಿತಿಯು ತೀರ್ಮಾನಿಸಿತು.**

## *07]. ವಿಷಯದ ಸಂಖ್ಯೆ: ತೆಆಸ್ಥಾಸ/110/2016-17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 28.12.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 118, ಲಾಲ್‌ಬಾಗ್ ರಸ್ತೆ, ಸ್ವತ್ತಿನ ಸಂಖ್ಯೆ 150 ಇಲ್ಲಿ ಮಂಜೂರಾದ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣ ಮಾಡಿದ್ದು, ಅನಧಿಕೃತ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ವೆಚ್ಚ ಕಾಮಗಾರಿಗಳ ಮೊತ್ತ ರೂ. 4.00 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕಾ.ಪಾ.ಅ (ಚಿಕ್ಕಪೇಟೆ) ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವ ವೆಚ್ಚವನ್ನು 2016-17ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅಡಿ ಪರಿಗಣಿಸಬಹುದಾಗಿದೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್

463(1) ರ ಪ್ರಕಾರ ಅನಧೀಕೃತ/ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳಬೇಕಿದೆ. 2016–17ರ ಆಯವ್ಯಯದ ಅನುದಾನದ ವಿವರಗಳು ಈ ಕೆಳಕಂಡಂತಿದೆ.

| ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" /Budget Book Page No. 111 (ರೂ. ಲಕ್ಷಗಳಲ್ಲಿ) | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯಂತೆ ಅನುದಾನ ಅಳವಡಿಸಿಕೊಂಡಿರುವ ಮೊತ್ತ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ಥಾವನೆಯ ಮೊತ್ತ |
| **150.00** | **43.78** | **193.28** | **0.55** | **4.00** |

ಜಾಬ್‌ಸಂಖ್ಯೆ ನೀಡಲು ಪ್ರಸ್ಥಾವನೆ ಸಲ್ಲಿಸಿರುವ ಮೊತ್ತ ರೂ. 4.00 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.55 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುವೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ 2016–17ರ ಪರಿಷ್ಕೃತ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ಕೊರತೆ ಮೊತ್ತವನ್ನು ಅಳವಡಿಸಿಕೊಳ್ಳಬೇಕಿದೆ. 2016–17ರ ಲೆಕ್ಕಶೀರ್ಷಿಕೆ ಪಿ–0055 ಅಡಿ ಕೊರತೆ ಅನುದಾನ ರೂ. 4.00 ಲಕ್ಷಗಳನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುವ ಬಗ್ಗೆ ಪರಿಶೀಲಿಸಿ, ಸೂಕ್ತ ಸ್ಪಷ್ಟೀಕರಣದೊಂದಿಗೆ ಸಮಿತಿಯ ಮುಂದೆ ಮರುಮಂಡಿಸಲು ಕಡತವನ್ನು ಹಿಂದಿರುಗಿಸಲು ಸಮಿತಿಯು ತೀರ್ಮಾನಿಸಿತು.**

## ***08]. ವಿಷಯದ ಸಂಖ್ಯೆ: ತೆಆಸ್ಥಾಸ/124/2016–17***

ಆಯುಕ್ತರ ದಿನಾಂಕ: 13.01.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2016–17ನೇ ಸಾಲಿನ ಆಯವ್ಯಯದಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಬೇಕಾಗಿರುವ ಹಣದ ಅಂದಾಜು ಪಟ್ಟಿಯನ್ನು ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ತಯಾರಿಸಲಾಗಿರುತ್ತದೆ. ಕೆಲವೊಂದು ಕಾಮಗಾರಿಯ ಲೆಕ್ಕ ಶೀರ್ಷಿಕೆ ಇಲ್ಲದೇ ಇರುವುದರಿಂದ ಮುಖ್ಯಲೆಕ್ಕಾಧಿಕಾರಿಗಳ ಕಛೇರಿಯಲ್ಲಿ ಹೊಸದಾಗಿ ಲೆಕ್ಕಶೀರ್ಷಿಕೆಯನ್ನು ನೀಡಬೇಕಾಗಿರುತ್ತದೆ. 2015–16ನೇ ಸಾಲಿನ ಆಯವ್ಯದಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ 2 ಇಲಾಖೆಯಡಿಯಲ್ಲಿ ಆಯವ್ಯಯ ಅಂದಾಜನ್ನು ಕಾಯ್ದಿರಿಸಲಾಗಿರುತ್ತದೆ. ಆದುದರಿಂದ ಆರೋಗ್ಯ ಸಾರ್ವಜನಿಕ ವಲಯ (Public Health Engineering-Zonal) ಮತ್ತು ಕಾಮಗಾರಿ–ಘನತ್ಯಾಜ್ಯ ವಸ್ತುಗಳ ನಿರ್ವಹಣೆ (Enginering Solid Waste Management) ಘನತ್ಯಾಜ್ಯ ನಿರ್ವಹಣೆಯು ಒಂದೇ ಇಲಾಖೆ ಆಗಿರುವುದರಿಂದ ಘನತ್ಯಾಜ್ಯ ನಿರ್ವಹಣೆ (Solid Waste Management) ಎಂದು ಒಂದೇ ಇಲಾಖೆಯ ವತಿಯಿಂದ ವ್ಯವಹರಿಸುವಂತೆ ಪ್ರಸ್ತಾವನೆಯನ್ನು ಮುಖ್ಯ ಲೆಕ್ಕಾಧಿಕಾರಿಗಳಿಗೆ ದಿನಾಂಕ: 04.02.2016 ರಂದು ಸಲ್ಲಿಸಲಾಗಿರುತ್ತದೆ.

ತದನಂತರ ದಿನಾಂಕ:03.03.2016ರಲ್ಲಿ ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಕೂಡ ಚರ್ಚಿಸಿ 2016–17ನೇ ಸಾಲಿಗೆ ಘನತ್ಯಾಜ್ಯ ನಿರ್ವಹಣೆಗೆ ಬೇಕಾಗಿರುವ ಆಯವ್ಯಯದ ಅಂದಾಜು ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ. ಆದರೆ 2016–17ನೇ ಸಾಲಿಗೆ ತಯಾರಿಸಿರುವ ಆಯವ್ಯಯ ಅಂದಾಜುಗಳಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಕಾಯ್ದಿರಿಸಿರುವ ಮೊತ್ತವು ವ್ಯತ್ಯಾಸವಿರುತ್ತದೆ.

ಮುಖ್ಯವಾಗಿ 2016–17ನೇ ಸಾಲಿನ ಆಯವ್ಯಯದಲ್ಲಿ ಘನತ್ಯಾಜ್ಯ ನಿರ್ವಹಣಾ ಘಟಕಗಳಿಗೆ ನೀಡುವ ಟಿಪ್ಪಿಂಗ್ ಫೀ, ಬಯೋರೆಮಿಡೇಷನ್ ಕಾರ್ಯಕ್ಕೆ, ವಾಹನಗಳ ನಿರ್ವಹಣೆ, ಬಯೋಮಿಥನೇಜೆಷನ್ ಘಟಕಗಳ ನಿರ್ವಹಣೆ ಮತ್ತು ಒಣತ್ಯಾಜ್ಯ ಸಂಗ್ರಹಣಾ ಕೇಂದ್ರಗಳ ರಿಪೇರಿ ಮತ್ತು ನಿರ್ವಹಣೆಗಳು ಇತ್ಯಾದಿಗಳಿಗೆ ಯಾವುದೇ ಮೊತ್ತವನ್ನು ಕಾಯ್ದಿರಿಸಿರುವುದಿಲ್ಲ. ಇದರಿಂದಾಗಿ ದೈನಂದಿನ ಕಾರ್ಯನಿರ್ವಹಣೆಯಲ್ಲಿ ವ್ಯತ್ಯಾಸ ಉಂಟಾಗಿರುತ್ತದೆ. ಕೆಲವೊಂದು ಲೆಕ್ಕಶೀರ್ಷಿಕೆಗಳನ್ನು ಸರ್ಕಾರದಿಂದ ನೀಡುವ ಅನುದಾನದಲ್ಲಿ ಭರಿಸಬಹುದಾಗಿದ್ದು, ಉಳಿದಂತೆ ಕೆಲವು ಲೆಕ್ಕಶೀರ್ಷಿಕೆಗಳಲ್ಲಿ ಮುಖ್ಯವಾಗಿ ಕಾರ್ಯನಿರ್ವಹಣೆ ವೆಚ್ಚವನ್ನು ಸರ್ಕಾರದ ಅನುದಾನದಲ್ಲಿ ಭರಿಸಲು ಬರುವುದಿಲ್ಲವಾದುದರಿಂದ ಈ ಕೆಳಕಂಡ ಮೊತ್ತವನ್ನು ಆಯವ್ಯಯದಲ್ಲಿ ಕಾಯ್ದಿರಿಸಲು ಅವಶ್ಯಕತೆಯಿರುತ್ತದೆ.

| Sl.No | Particulars | Proposed Budget (Rs.in lakhs) for the year 2016-17 | Alloted as per Budge (in Rs.for lakhs) 2016-17 |
|---|---|---|---|
| 1. | O & M for Biomethanization Units | 109.2 | - |
| 2. | Media publication & public awareness, IEC, | 500 | - |
| 3. | Tipping Fees/Transportation to segregation point –P-1521 | 1805 | - |
| 4. | Bio-Remediation at Mandur landfill site | 8843.04 (3000 Required for this year) | - |
| 5. | Cleaning of community Toilets and urinals | 351 | - |
| 6. | Consultancy Charges (DPR Preparation) P-1788 | 100 | 10.00 |
| 7. | Purchase of conservancy articles P-0277 | 500 | 43.77 |
| 8. | Hire charges of SWM vehicles P-2345 | 500 | 5.00 |
| 9. | M & R to Vehicles P-0354/P2176 | 750 | 3.00 |
| 10. | Providing Name boards to black spots and MSW sites. | 25 | - |
| 11. | Operation and Maintenance of Landfill/ Waste Dumping yards/Processing plants P-0968 (New processing sites). | 1450 | - |
| 12. | Establishment of Primary collections centers/ Dry waste Collection Centers/Decentralized. Composting/Biomethanisation plants P-1862 | | - |
| | Pending Bills | | 22.00 |
| | Spillover Works | | 11.00 |
| Total | | 9,331.16 | 94.77 |

ಬಯೋರೆಮಿಡಿಯೇಷನ್ ಕಾರ್ಯಕ್ಕೆ ಈ ಸಾಲಿನಲ್ಲಿ 88.43 ಕೋಟಿ ಬದಲು 30 ಕೋಟಿ ಮೊತ್ತವನ್ನು ಕಾಯ್ದಿರಿಸಿ, ಒಟ್ಟು ರೂ.9,331.16 ಲಕ್ಷಗಳನ್ನು 2016–17ನೇ ಸಾಲಿನ ಲೆಕ್ಕಶೀರ್ಷಿಕೆಗಳಿಗೆ ಪಾಲಿಕೆ ಹಣವನ್ನು ಘನತ್ಯಾಜ್ಯ ನಿರ್ವಹಣೆಗೆ ಕಾಯ್ದಿರಿಸುವಂತೆ ಪ್ರಸ್ತಾವನೆಯನ್ನು ಅನುಮೋದನೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: 2016–17ನೇ ಸಾಲಿನ ಆರ್ಥಿಕ ವರ್ಷವು ಮುಕ್ತಾಯದ ಹಂತದಲ್ಲಿರುವುದರಿಂದ ಸದರಿ ಪ್ರಸ್ತಾವನೆಯನ್ನು ತಿರಸ್ಕರಿಸಲು ಸಮಿತಿಯು ತೀರ್ಮಾನಿಸಿತು.**

## *09]. ವಿಷಯದ ಸಂಖ್ಯೆ: ತೆಆಸ್ಥಾಸ/130/2016-17*

ಆಯುಕ್ತರ ದಿನಾಂಕ: 18.01.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ ರಾಜ್ ಪಾಟೀಲ್, ಅಧ್ಯಕ್ಷರು, 9ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನ-2016 ಅಟ್ಲಾಂಟಿಕ್ ಸಿಟಿ ಕನ್ವೆನ್ಷನ್ ಸೆಂಟರ್, ಅಟ್ಲಾಂಟಿಕ್ ಸಿಟಿ ರವರ ಕೋರಿಕೆಯ ಮೇರೆಗೆ, ಸನ್ಮಾನ್ಯ ಶ್ರೀರಾಮಲಿಂಗಾ ರೆಡ್ಡಿ, ಮಾನ್ಯ ಸಾರಿಗೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಪೂಜ್ಯ ಮಹಾಪೌರರು ತಮ್ಮ ಪತ್ರಗಳಲ್ಲಿ ತಿಳಿಸಿರುವಂತೆ, ಕನ್ನಡ ಕೂಟಾಸ್ ಆಫ್ ಅಮೇರಿಕಾ-ಅಕ್ಕಾ 1998ರಲ್ಲಿ ಸ್ಥಾಪನೆಗೊಂಡು 2 ಲಕ್ಷ ಸದಸ್ಯರನ್ನು ಹೊಂದಿರುವ ಲಾಭರಹಿತ ಸಂಸ್ಥೆಯಾಗಿದ್ದು, ಅಂತರಾಷ್ಟ್ರೀಯ ಮಟ್ಟದಲ್ಲಿ ಕನ್ನಡ ಭಾಷೆಯ ಪ್ರಚಾರ ಹಾಗೂ ಏಳಿಗೆಗಾಗಿ ಶ್ರಮಿಸುತ್ತಿರುವ ಸದರಿ ಸಂಸ್ಥೆಯು 2016 ಸೆಪ್ಟೆಂಬರ್ 2, 3 ಮತ್ತು 4ರಂದು ಆಯೋಜಿಸಿರುವ ಸಮ್ಮೇಳನಕ್ಕಾಗಿ ಸೂಕ್ತ ಧನಸಹಾಯ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲು ಆದೇಶಿಸಿರುತ್ತಾರೆ.

ಮುಂದುವರೆದಂತೆ, 2016-17ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 24 ಸಂಸ್ಕೃತಿ ಮತ್ತು ಕ್ರೀಡೆ, ಪಿ-048 ಕೊಡುಗೆಗಳು ಮತ್ತು ಸಹಾಯಧನಕ್ಕಾಗಿ ರೂ.500.00 ಲಕ್ಷಗಳನ್ನು ಮೀಸಲಿರಿಸಲಾಗಿರುತ್ತದೆ. ಇದರಂತೆ ಅನುಬಂಧ-2ರಲ್ಲಿ 30 ಸಂಘ/ಸಂಸ್ಥೆಗಳ ಸಹಾಯಧನ ಹಂಚಿಕೆ ಪಟ್ಟಿಯಲ್ಲಿ ಸದರಿ ಸಂಸ್ಥೆಯ ಹೆಸರು ಸೇರ್ಪಡೆಗೊಂಡಿರುವುದಿಲ್ಲ.

ತತ್ಸಂಬಂಧವಾಗಿ ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 9ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನ-2016 ರವರಿಗೆ ಸಹಾಯಧನ ಮಂಜೂರಾತಿ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

*-ಮುಂದೂಡಿದೆ-*

## *10]. ವಿಷಯದ ಸಂಖ್ಯೆ: ತೆಆಸ್ಥಾಸ/132/2016-17*

ಆಯುಕ್ತರ ದಿನಾಂಕ: 02-02-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮಾನ್ಯ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರ ಟಿಪ್ಪಣಿ ಸಂಖ್ಯೆ ಬೆಂ.ಅ & ನ.ಯೋ.ಸ/39/2016-17 ದಿನಾಂಕ: 17-01-2017 ರ ಮಾನ್ಯ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರ ಟಿಪ್ಪಣಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಲೆಕ್ಕಶೀರ್ಷಿಕೆ ಪಿ-0190 ಅಡಿಯಲ್ಲಿ ಅನುದಾನ ಲಭ್ಯವಿಲ್ಲದಿರುವುದರಿಂದ ಸಾರ್ವಜನಿಕರ ದೂರಿನನ್ವಯ ಮಹಾಪೌರರ ತಪಾಷಣೆ ವೇಳೆ ಕಂಡುಬರುವಂತಹ ತುರ್ತು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಜಿಲ್ಲಾ ಉಸ್ತುವಾರಿ ಸಚಿವರ ವಿವೇಚನೆಯಲ್ಲಿ ಲೆಕ್ಕಶೀರ್ಷಿಕೆ ಪಿ-3075 ರಿಂದ ಲೆಕ್ಕಶೀರ್ಷಿಕೆ ಪಿ-0190ಗೆ ಅನುದಾನ ಮರುಹೊಂದಾಣಿಕೆ ಮಾಡುವ ವಿಚಾರದಲ್ಲಿ ಮಹಾಪೌರರು ಸಲ್ಲಿಸಿರುವ ಮನವಿಯನ್ನು ಲಗತ್ತಿಸಿ, ಜಿಲ್ಲಾ ಉಸ್ತುವಾರಿ ಸಚಿವರ ವಿವೇಚನೆ ಲೆಕ್ಕಶೀರ್ಷಿಕೆ ಪಿ-3075 ರಿಂದ ರೂ. 20.00 ಕೋಟಿಗಳ ಅನುದಾನವನ್ನು ಲೆಕ್ಕಶೀರ್ಷಿಕೆ ಪಿ-0190ಕ್ಕೆ ಮರುಹೊಂದಾಣಿಕೆ ಮಾಡಲು ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ. ಬೃಹತ್ ಬೆಂಗಳೂರು ನಗರ ಪಾಲಿಕೆಯ 2016-17ರ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ-3075 ಅಡಿ ಅನುದಾನ ಬಳಸುವ ಸಂಬಂಧ ಮಾನ್ಯ ಬೆಂಗಳೂರು ಜಿಲ್ಲಾ ಉಸ್ತುವಾರಿ ಸಚಿವರು ನಗರ ವ್ಯಾಪ್ತಿಯಲ್ಲಿ ಅವಶ್ಯವಿರುವ ತುರ್ತು ಕಾಮಗಾರಿಗಳನ್ನು ಕೈಗೊಳ್ಳುವ ದೃಷ್ಟಿಯಿಂದ ಈ ಕಛೇರಿಯಿಂದ ಆಗಿಂದಾಗ್ಗೆ ನೀಡುವ ನಿರ್ದೇಶನಗಳನ್ವಯ ಜಿಲ್ಲಾ ಉಸ್ತುವಾರಿ ಸಚಿವರ ವಿವೇಚನಾ ಕೋಟಡಡಿಯಲ್ಲಿ ಉಪಯೋಗಿಸಲು ಸೂಚನೆ ನೀಡಿರುತ್ತಾರೆ. 2016-17ರ ಆಯವ್ಯಯದ ಲೆಕ್ಕಶೀರ್ಷಿಕೆ "ಪಿ3075" ಅನುದಾನದ ವಿವರಗಳು ಈ ಕೆಳಕಂಡಂತಿದೆ.

(ರೂ. ಕೋಟಿಗಳಲ್ಲಿ )

| ಲೆಕ್ಕಶೀರ್ಷಿಕೆ: P- 3075 / Special Comprehensive Development Works in Bangalore city (Bangalore city incharge Minister's Discretionary Grants) / Page No. 129 | | | | |
|---|---|---|---|---|
| 2016-17 ರ ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಮಾನ್ಯ ಆಯುಕ್ತರ ಆದೇಶದಂತೆ ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ ಕಡತ ಸಲ್ಲಿಸಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ತಾವನೆಯ ಮೊತ್ತ |
| 250.00 | 57.89 | 22.50 | 169.61 | 20.00 |

2016-17ರ ಆಯವ್ಯಯದಲ್ಲಿ ಪಿ-3075ರಲ್ಲಿ ಲಭ್ಯವಿರುವ ರೂ. 169.61 ಕೋಟಿಗಳ ಅನುದಾನದಲ್ಲಿ ರೂ. 20.00 ಕೋಟಿಗಳ ಅನುದಾನವನ್ನು ಲೆಕ್ಕಶೀರ್ಷಿಕೆ ಪಿ-0190ಕ್ಕೆ ಮರುಹೊಂದಾಣಿಕೆ ಮಾಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 02.02.2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***11]. ವಿಷಯದ ಸಂಖ್ಯೆ: ತೆಆಸ್ಥಾಸ/133/2016-17***

ಆಯುಕ್ತರ ದಿನಾಂಕ: 04-08-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಘನತ್ಯಾಜ್ಯ ನಿರ್ವಹಣೆ ನಿಯಮ 2016 ದಂತೆ ನಗರ ಸ್ಥಳೀಯ ಸಂಸ್ಥೆಗಳು ಘನತ್ಯಾಜ್ಯ ವಸ್ತುವನ್ನು ಮೂಲದಿಂದಲೇ ಅಂದರೆ ಮನೆಮನೆಗಳಿಂದ ಮತ್ತು ಇತರೆ ತ್ಯಾಜ್ಯ ಉತ್ಪಾದಕರಿಂದ ಸಂಗ್ರಹಿಸಿ ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡಬೇಕಾಗಿರುತ್ತದೆ.ಈ ನಿಟ್ಟಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸದರಿ ನಿಯಮಾನುಸಾರ ಘನತ್ಯಾಜ್ಯ ನಿರ್ವಹಣೆಗಾಗಿ ವಾರ್ಷಿಕ ಸುಮಾರು 500 ಕೋಟಿಯಷ್ಟು ಮೊತ್ತವನ್ನು ವೆಚ್ಚಮಾಡುತ್ತಿದ್ದು, ಈ ಮೊತ್ತವು ಪ್ರತಿ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುತ್ತದೆ.ಈ ನಿಟ್ಟಿನಲ್ಲಿ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಕಟ್ಟಡದ ಪ್ರದೇಶವನ್ನು ಆಧಾರವಾಗಿರಿಸಿಕೊಂಡು ಕರ್ನಾಟಕ ಪೌರ ನಿಗಮಗಳ ಕಾಯಿದೆ 1976 ಪ್ರಕರಣ 103 B ಅನ್ವಯ, ತೆರಿಗೆ ನಿಯಮಾವಳಿ 19 A ರಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಉಪಕರ ದರಗಳನ್ನು ನಿಗದಿಪಡಿಸಲಾಗಿರುತ್ತದೆ. ಇದರ ಆಧಾರದಲ್ಲಿ, ಉಲ್ಲೇಖ 3ರಂತೆ ಘನತ್ಯಾಜ್ಯ ನಿರ್ವಹಣಾ ಉಪಕರವನ್ನು ಕಂದಾಯ ಇಲಾಖೆಯು ಆಸ್ತಿ ತೆರಿಗೆ ಸಂಗ್ರಹಿಸುವ ಸಮಯದಲ್ಲಿ ಆಸ್ತಿ ತೆರಿಗೆಯೊಂದಿಗೆ ವಸೂಲಿ ಮಾಡಲು ದಿನಾಂಕ: 29-12-2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯಲ್ಲಿ ನಿರ್ಣಯದಂತೆ, 2011-12ನೇ ಸಾಲಿನಿಂದ ಉಪಕರಗಳನ್ನು ಲೆಕ್ಕ ಶೀರ್ಷಿಕೆ 'ಘನತ್ಯಾಜ್ಯ ನಿರ್ವಹಣೆ ಕರ ಸಂಖ್ಯೆ R0194' ರಡಿಯಲ್ಲಿ ನಿರ್ವಹಿಸಲು ಸೂಚಿಸಿ ಈ ಕೆಳಕಂಡ ಉಪಕರಗಳನ್ನು ವಸೂಲಿ ಮಾಡಲು ದಿನಾಂಕ: 15-02-2011 ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ.

I. ವಾಸದ ಕಟ್ಟಡಗಳಿಗೆ

| ವಿವರ | ಮಾಹೆಯಾನ |
|---|---|
| • 1000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 10 |
| • 1001 ಚದರಡಿ ಇಂದ' 3000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 30 |
| • 3001 ಚದರಡಿ ಗಿಂತ ಮೇಲ್ಪಟ್ಟ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 50 |

II . ವಾಣಿಜ್ಯ ಕಟ್ಟಡಗಳಿಗೆ

| ವಿವರ | ಮಾಹೆಯಾನ |
|---|---|
| • 1000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 50 |
| • 1001 ಚದರಡಿ ಇಂದ 5000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 100 |
| • 5001 ಚದರಡಿ ಗಿಂತ ಮೇಲ್ಪಟ್ಟ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 200 |

III . ಕೈಗಾರಿಕ ಕಟ್ಟಡಗಳಿಗೆ

| ವಿವರ | ಮಾಹೆಯಾನ |
|---|---|
| • 1000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 100 |
| • 1001 ಚದರಡಿ ಇಂದ 5000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 200 |
| • 5001 ಚದರಡಿ ಗಿಂತ ಮೇಲ್ಪಟ್ಟ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 300 |

IV. ಹೋಟೆಲ್‌ಗಳು, ಕಲ್ಯಾಣ ಮಂಟಪಗಳು, ನರ್ಸಿಂಗ್ ಹೋಂಗಳು

| ವಿವರ | ಮಾಹೆಯಾನ |
|---|---|
| • 1000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 300 |
| • 1001 ಚದರಡಿ ಇಂದ 5000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 500 |
| • 5001 ಚದರಡಿ ಗಿಂತ ಮೇಲ್ಪಟ್ಟ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 600 |

ಘನತ್ಯಾಜ್ಯಗಳ ನಿರ್ವಹಣೆಗಾಗಿ2011–12ನೇ ಸಾಲಿನಿಂದ 2014–15ರವರೆಗೂ ಘನತ್ಯಾಜ್ಯದ ನಿರ್ವಹಣೆ ವೆಚ್ಚ ಮತ್ತು ಘನತ್ಯಾಜ್ಯ ಉಪಕರ ಸಂಗ್ರಹವಾಗಿರುವ ಮೊತ್ತವು ಈ ಕೆಳಕಂಡಿರುತ್ತದೆ.ಅದರಂತೆ ಘನತ್ಯಾಜ್ಯ ನಿರ್ವಹಣೆಗೆ ಮಾಡಿರುವ ವೆಚ್ಚಕ್ಕೆ ಹೋಲಿಸಿದರೆ ಸಂಗ್ರಹವಾಗಿರುವ ಘನತ್ಯಾಜ್ಯ ಉಪಕರ ಮೊತ್ತವು ಕೇವಲ ಶೇ.9 ರಿಂದ 15% ರಷ್ಟು ಮಾತ್ರ.

| ಕ್ರ. ಸಂ | ವಿವರ | ವಾರ್ಷಿಕ ವೆಚ್ಚ (ರೂ. ಕೋಟಿಗಳಲ್ಲಿ) | | ವಾರ್ಷಿಕ ಘನತ್ಯಾಜ್ಯ ಉಪಕರ ಸಂಗ್ರಹಣೆ (ರೂ. ಕೋಟಿಗಳಲ್ಲಿ) | ವೆಚ್ಚ ಭರಿತ (Cost recovery) |
|---|---|---|---|---|---|
| 1. | • ಸ್ವಚ್ಚತೆ ಮತ್ತು ಕಸ ಸಾಗಾಣಿಕೆ | 2011–12 | 237.42 | 36.18 | 15.23% |
| 2. | • ಘನತ್ಯಾಜ್ಯ ನಿರ್ವಹಣೆ ಕೇಂದ್ರ ಹಳೆ ಹಾಗೂ ಹೊಸ ಪ್ರದೇಶಗಳಲ್ಲಿ | 2012–13 | 286.28 | 37.67 | 13.15% |
| 3. | | 2013–14 | 352.21 | 37.67 | 10.60% |
| 4. | • ಘನತ್ಯಾಜ್ಯ ವಿಲೇವಾರಿ ನಿರ್ವಹಣೆ ವೆಚ್ಚ<br>• ಘನತ್ಯಾಜ್ಯ ವಿಲೇವಾರಿ ನಿರ್ವಹಣೆ | 2014–15 | 421.13 | 41.07 | 9.75% |

ಮುಂದುವರೆದಂತೆ, ಘನತ್ಯಾಜ್ಯ ನಿರ್ವಹಣಾ ವ್ಯವಸ್ಥೆಯನ್ನು ಸುಧಾರಿಸಲು ಸೇವಾ ವೆಚ್ಚವನ್ನು ಭರಿಸಲು ಬಳಕೆದಾರರಿಗೆ ವೆಚ್ಚಗಳನ್ನು ವಿಧಿಸುವುದು ಮತ್ತು ವಸೂಲಾತಿ ಮಾಡುವುದು ಕೇಂದ್ರ ಸರ್ಕಾರದ ಜವಾಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಅಭಿಯಾನದ (ಜೆ.ಎನ್.ಎನ್.ಯು.ಆರ್.ಎಂ) ಅಡಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಅಗತ್ಯವಿದ್ದಂತಹ ಕಡ್ಡಾಯ ಸುಧಾರಣೆಗಳಲ್ಲಿ ಒಂದಾಗಿದ್ದು, ಪೂರ್ಣ ಪ್ರಮಾಣದ ಘನತ್ಯಾಜ್ಯದ ನಿರ್ವಹಣೆ ವೆಚ್ಚವನ್ನು (Operation and

Maintenance cost) ಉಪಕರ (ಸೇವಾ ಶುಲ್ಕ) ಮೂಲಕ ಸಂಗ್ರಹಣೆ ಮಾಡಿ ನಿರ್ವಹಣೆ ಮಾಡಬೇಕಾಗಿದ್ದು, ಈ ನಿಟ್ಟಿನಲ್ಲಿ ಉಪಕರ (ಸೇವಾ ಶುಲ್ಕ)ವನ್ನು ಪರಿಷ್ಕರಿಸಲು ಜಂಟಿ ಕಾರ್ಯದರ್ಶಿಗಳು,ಕೇಂದ್ರ ನಗರಾಭಿವೃದ್ಧಿ ಇಲಾಖೆ ರವರು ದಿನಾಂಕ: 02–07–2012 ರಲ್ಲಿಯೇ ಸೂಚಿಸಿರುತ್ತಾರೆ ಹಾಗೂ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಸ್ಥಳೀಯ ಸಂಸ್ಥೆಗಳ ವರದಿ ಮಾರ್ಚ್ 2013ಕ್ಕೆ (CAG-2013) ಕೊನೆಗೊಂಡ ವರ್ಷದ ವರದಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಉಪಕರ ಕುರಿತು ಕೆಲವೊಂದು ಸಲಹೆಗಳೊಂದಿಗೆ ಉತ್ಪತ್ತಿ ಮಾಡಲಾದ ತ್ಯಾಜ್ಯಗಳ ಸ್ವರೂಪ ಮತ್ತು ಪರಿಮಾಣಕ್ಕೆ ತಕ್ಕಂತೆ ಸೂಕ್ತವಾದ ಸೆಸ್ಸ್ ಮೊತ್ತವನ್ನು ವಿಧಿಸುವಂತೆ ಅಭಿಪ್ರಾಯ ನೀಡಲಾಗಿರುತ್ತದೆ.

ಈ ಕುರಿತಂತೆ ದಿನಾಂಕ:10–02–2016 ರಂದು ಅಪರ ಮುಖ್ಯ ಕಾರ್ಯದರ್ಶಿಯವರು, ನಗರಾಭಿವೃದ್ಧಿ ಇಲಾಖೆರವರ ಅಧ್ಯಕ್ಷತೆಯಲ್ಲಿ ರಾಜಸ್ಥಾನ ಸರ್ಕಾರವು ಘನತ್ಯಾಜ್ಯ ವಿಲೇವಾರಿಯ ಬಗ್ಗೆ ಬಳಕೆದಾರರ ಮೇಲೆ ಶುಲ್ಕ ವಿಧಿಸುವ ಬಗ್ಗೆ ಹಾಗೂ ಘನತ್ಯಾಜ್ಯವನ್ನು ಸಂಗ್ರಹಿಸುವ, ಸಾಗಾಣಿಕೆ ಹಾಗೂ ಘನತ್ಯಾಜ್ಯವನ್ನು ಉಪಯೋಗಿಸಿ ಪುನರ್ ಬಳಕೆಯ ಬಗ್ಗೆ ನಡೆದ ಸಭೆಯಲ್ಲಿ ಪ್ರಸ್ತುತ ಘನತ್ಯಾಜ್ಯ ನಿರ್ವಹಣೆಗೆ ಪಾಲಿಕೆಯು ಮಾಡುತ್ತಿರುವ ವೆಚ್ಚ ಮತ್ತು ವಸೂಲಾತಿಯಾಗುವ ಘನತ್ಯಾಜ್ಯ ನಿರ್ವಹಣೆ ಕರದಲ್ಲಿ ತುಂಬಾ ವ್ಯತ್ಯಾಸವಿರುವುದರ ಕುರಿತು ಸಭೆಯಲ್ಲಿ ಚರ್ಚಿಸಲಾಗಿ ಪಾಲಿಕೆಯು ಆಸ್ತಿ ತೆರಿಗೆ ವಸೂಲಾತಿ ಮಾಡುವ ಸಂದರ್ಭದಲ್ಲಿ ಇನ್ನಿತರ ಇಲಾಖೆಯ ನಿಯಮಾವಳಿಯಂತೆ ಆರೋಗ್ಯ ಕರ, ಗ್ರಂಥಾಲಯ ಕರ ಮತ್ತು ಭಿಕ್ಷುಕರ ಕರಗಳನ್ನು ಶೇಖಡವಾರು ವಸೂಲಾತಿ ಮಾಡುತ್ತಿದ್ದು ಇದರಂತೆ ಘನತ್ಯಾಜ್ಯ ನಿರ್ವಹಣೆಯ ಕರವನ್ನು ಸಹ ಶೇಕಡವಾರು ದರದಲ್ಲಿ ವಸೂಲಿ ಮಾಡುವುದರಿಂದ ಪಾಲಿಕೆಯ ಸಂಪನ್ಮೂಲಗಳನ್ನು ವೃದ್ಧಿಸಬಹುದಾಗಿದ್ದು, ಈ ಉದ್ದೇಶಕ್ಕಾಗಿ ಪಾಲಿಕೆಯು ಮಾಡುವ ವೆಚ್ಚವನ್ನು ಸರದೂಗಿಸಲು ಕ್ರಮವಹಿಸುವ ಕುರಿತು, ಸದರಿ ಸಭೆಯಲ್ಲಿ ಗಂಭೀರವಾಗಿ ಚರ್ಚಿಸಿ ಈ ಕೆಳಕಂಡಂತೆ' ಆದೇಶಿಸಲಾಗಿರುತ್ತದೆ.

"ಘನತ್ಯಾಜ್ಯ ನಿರ್ವಹಣೆಗೆ ಪಾಲಿಕೆಯು ಮಾಡುತ್ತಿರುವ ವೆಚ್ಚವನ್ನು ಈ ಉದ್ದೇಶಕ್ಕಾಗಿ ವಿಧಿಸುವ ಕರವಸೂಲಾತಿಯಲ್ಲಿ ಸರಿದೂಗಿಸುವ ದೃಷ್ಟಿಯಿಂದ ಆಸ್ತಿ ತೆರಿಗೆ ಮೇಲೆ ಶೇ.15% ರಷ್ಟು ಘನತ್ಯಾಜ್ಯ ನಿರ್ವಹಣೆ ಕರ ವಸೂಲಾತಿ ಮಾಡಲು ಮುನ್ಸಿಪಲ್ ಕಾಯ್ದೆ/ ನಿಯಮಾವಳಿಗೆ ಸೂಕ್ತ ತಿದ್ದುಪಡಿ ಮಾಡಿ, ಪಾಲಿಕೆಯಿಂದ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರದ ಪರಿಶೀಲಿನೆಗೆ ತುರ್ತಾಗಿ ಸಲ್ಲಿಸುವಂತೆ ಹಾಗೂ ರಾಜಸ್ಥಾನ ನಿಯಮಗಳಲ್ಲಿರುವಂತೆ ದಂಡಗಳನ್ನುವಿಧಿಸಲು ಸಹಪ್ರಸ್ತಾವನೆಯನ್ನು ಸಲ್ಲಿಸಲು ತಿಳಿಸಲಾಗಿರುತ್ತದೆ."

ಈ ಹಿನ್ನೆಲೆಯಲ್ಲಿ ಸರ್ಕಾರದ ಆದೇಶದನ್ವಯ ಘನತ್ಯಾಜ್ಯ ಕರವನ್ನು ಪರಿಷ್ಕೃತಗೊಳಿಸಲು ಕರ್ನಾಟಕ ಮುನ್ಸಿಪಲ್ ಕಾಯ್ದೆ/ ನಿಯಮಾವಳಿ ತಿದ್ದುಪಡಿ ತರುವ ಅವಶ್ಯಕತೆಯಿರುವುದರಿಂದ ಪ್ರಸ್ತುತ ಆಸ್ತಿ ತೆರಿಗೆಯ ಶೇ.15%ರಷ್ಟು ಹೆಚ್ಚಿಸಿದಲ್ಲಿ ವಾರ್ಷಿಕ ಆಸ್ತಿ ತೆರಿಗೆ ರೂ.2000 ಕೋಟಿ ಎಂದುಕೊಂಡಲ್ಲಿ ರೂ. 300 ಕೋಟಿ ಘನತ್ಯಾಜ್ಯ ಉಪಕರಗಳನ್ನು ಸಂಗ್ರಹಿಸಬಹುದಾಗಿದ್ದು ಮತ್ತು ಭಾರತ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ಸ್ಥಳೀಯ ಸಂಸ್ಥೆಗಳ ವರದಿ ಮಾರ್ಚ್ 2013ಕ್ಕೆ (ಸಿಎಜಿ–2013)ರವರ ವರದಿಯಲ್ಲಿ ಘನತ್ಯಾಜ್ಯ ನಿರ್ವಹಣೆಯ ಉಪಕರ ಕುರಿತು ನೀಡಿರುವಸಲಹೆಗಳಂತೆ ಧಾರ್ಮಿಕ ಸಂಸ್ಥೆಗಳಲ್ಲಿಯೂ ಹಾಗೂ ಬಾಡಿಗೆ ನೀಡಿರುವ ಪಾಲಿಕೆಯ ಕಟ್ಟಡಗಳಲ್ಲೂ ಕೂಡ ತ್ಯಾಜ್ಯ ಉತ್ಪಾದನೆ ಪ್ರಮಾಣದ ಮೇಲೆ ಉಪಕರಗಳನ್ನು ಸಂಗ್ರಹಿಸಬೇಕಾಗಿದ್ದು, ಈ ಬಗ್ಗೆಕಾನೂನು ಕೋಶದ ಮುಖ್ಯಸ್ಥರಿಗೆ' ಅಭಿಪ್ರಾಯಹಾಗೂ ಶೇ. 15%ರಷ್ಟು ಘನತ್ಯಾಜ್ಯ ಕರಗಳನ್ನು ವಿಧಿಸಿದಲ್ಲಿ ಪ್ರಸ್ತುತ ಪಡೆಯುತ್ತಿರುವ ಕರಗಳ ಯಾವುದೇ ಪ್ರಕರಣಗಳಲ್ಲಿ ಕಡಿಮೆಗೊಳ್ಳುವ ಕುರಿತಂತೆ ಉಪ ಆಯುಕ್ತರು ಕಂದಾಯ ರವರ ಅಭಿಪ್ರಾಯ ಕೂಡ ಪಡೆಯಲಾಗಿರುತ್ತದೆ. ಅದರಂತೆ ಕಾನೂನು ಕೋಶದ ಮುಖ್ಯಸ್ಥರು ಕರ್ನಾಟಕ ಮುನ್ಸಿಪಲ್ ಕಾಯ್ದೆ 1976 ರಲ್ಲಿ ಸೆಕ್ಷನ್ 103B (2) ರಲ್ಲಿ ತಿದ್ದುಪಡಿ ತರಲು ಪ್ರತಿ ಆಸ್ತಿ ತೆರಿಗೆಗೆ ಗರಿಷ್ಟ ರೂ. 5 ಸಾವಿರ ಪ್ರತಿ ಮಾಹೆ ಮೀರದಂತೆ ನಿಗಧಿಪಡಿಸಲು ಅಭಿಪ್ರಾಯಿಸಿರುತ್ತಾರೆ.ಸದರಿ ಪ್ರಸ್ತಾನೆಯ ಕುರಿತು ಉಪ ಆಯುಕ್ತರು

ಕಂದಾಯ ರವರು ವಾರ್ಷಿಕ ರೂ. 5ಲಕ್ಷಕ್ಕಿಂತ ಮೇಲ್ಪಟ್ಟು ಆಸ್ತಿ ತೆರಿಗೆ ಪಾವತಿಸುತ್ತಿರುವ ಹಲವಾರು ಪ್ರಕರಣಗಳಿದ್ದು, ಈ ರೀತಿ ಮಿತಿಗೊಳಿಸಿದ್ದಲ್ಲಿ ನಗರ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗುತ್ತದೆಂದು ಅಭಿಪ್ರಾಯಿಸಿರುವ ಹಿನ್ನೆಲೆಯಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಕಟ್ಟಡಗಳಿಗೆ ಹಾಗೂ ಖಾಲಿ ನಿವೇಶನಗಳಿಗೆ ಆಸ್ತಿತೆರಿಗೆಯ ಮೇಲೆ ಶೇ.15% ರಷ್ಟು ಘನತ್ಯಾಜ್ಯ ಉಪಕರಗಳನ್ನು ಸಂಗ್ರಹಿಸುವುದು ಸೂಕ್ತವಾಗಿರುತ್ತದೆ. ಇದಲ್ಲದೇಪಾಲಿಕೆಯು ಹಾಲಿ ಕೆ.ಎಂ.ಸಿ ತಿದ್ದುಪಡಿ ಕಾಯ್ದೆ ಷೆಡ್ಯೂಲ್–13 ಸೆಕ್ಷನ್ 431 (A) ರಲ್ಲಿ ಸೂಚಿಸಿರುವಂತೆ ಘನತ್ಯಾಜ್ಯ ನಿಯಮ ಉಲ್ಲಂಘನೆಗಳಿಗೆ ದಂಡ ವಿಧಿಸಲಾಗುತ್ತಿದ್ದು, ಅವುಗಳನ್ನು ಒಳಗೊಂಡಂತೆ ರಾಜಸ್ಥಾನ ಸರ್ಕಾರವು ವಿಧಿಸುತ್ತಿರುವ ಘನತ್ಯಾಜ್ಯ ನಿಯಮದಡಿ ವಿವಿಧ ಉಲ್ಲಂಘನೆಯ ಪ್ರಕರಣಗಳಿಗೆ ದಂಡ ವಿಧಿಸುತ್ತಿರುವ ರೀತ್ಯಾ ಪಾಲಿಕೆಯು ಅಳವಡಿಸಿಕೊಳ್ಳಬಹುದಾಗಿರುತ್ತದೆ.(ಅನುಬಂಧ–ಅ ಲಗತ್ತಿಸಿದೆ) ಮೇಲೆ ವಿವರಿಸಿದ ಹಿನ್ನಲೆಯಲ್ಲಿ ಈ ಕೆಳಕಂಡ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸಲ್ಲಿಸಿದೆ.

1. ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಕಟ್ಟಡಗಳಿಗೆ ಹಾಗೂ ಖಾಲಿ ನಿವೇಶನಗಳಿಗೆ ಆಸ್ತಿತೆರಿಗೆಯ ಮೇಲೆ ಶೇ.15% ರಷ್ಟು ಘನತ್ಯಾಜ್ಯ ಉಪಕರಗಳನ್ನು 2017–18 ಸಾಲಿನಿಂದ ಸಂಗ್ರಹಿಸುವ ಬಗ್ಗೆ.
2. ರಾಜಸ್ಥಾನ ಸರ್ಕಾರವು ವಿಧಿಸುತ್ತಿರುವ ಘನತ್ಯಾಜ್ಯ ನಿಯಮ ಉಲ್ಲಂಘನೆಯ ಪ್ರಕರಣಗಳಿಗೆ ದಂಡ ವಿಧಿಸುತ್ತಿರುವ ರೀತ್ಯಾ ಪಾಲಿಕೆಯು ಅಳವಡಿಸಿಕೊಳ್ಳುವ ಕುರಿತು.

<u>ದಿನಾಂಕ: 29–12–2016 ರ ಪಾಲಿಕೆ ಸಭೆಯಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಪರಿಶೀಲನೆಗಾಗಿ ವಿಷಯವನ್ನು ಕಳುಹಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.</u>

***–ಮುಂದೂಡಿದೆ–***

## ***12]. ವಿಷಯದ ಸಂಖ್ಯೆ: ತೆಆಸ್ಥಾಸ/134/2016–17***

ಜಂಟಿ ಆಯುಕ್ತರು (ಆರೋಗ್ಯ) ರವರ ದಿನಾಂಕ: 03.02.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ.ಗೋವಿಂದ್ ನಾಯಕ್, ನಂ.30 ಚೊಕ್ಕನಹಳ್ಳಿ ಬಡಾವಣೆ, ಹೆಗ್ಡೆನಗರ ಮುಖ್ಯರಸ್ತೆ, ಯಲಹಂಕ, ಬೆಂಗಳೂರು–64 ರವರು ಮನವಿ ಪತ್ರವನ್ನು ಸಲ್ಲಿಸಿದ್ದು, ಇವರ ಮಗನಾದ ಶ್ರೀ.ವಿಶಾಲ್, 20ವರ್ಷ ರವರು ದಿನಾಂಕ: 28.07.2015 ರಂದು ರಾತ್ರಿ 9:40 ಗಂಟೆಗೆ ಬೃ.ಬೆಂ.ಮ.ಪಾಲಿಕೆಯ ಯಲಹಂಕ ವಲಯದ ವಾರ್ಡ್ ಸಂಖ್ಯೆ: 05ರ ಹೆಗ್ಡೆನಗರ ಮುಖ್ಯರಸ್ತೆ ಶೋಭಾ ಸಿಟಿ ಎದುರುಗಡೆ ರಸ್ತೆ ಗುಂಡಿಯಲ್ಲಿ ಬಿದ್ದು ಅಪಘಾತವಾಗಿ ಗ್ಯಾಂಗ್‌ರಿನ್ ಆಗಿದ್ದು, ವೈದ್ಯರು ಒಂದು ಕಾಲನ್ನು ತೆಗೆದಿರುತ್ತಾರೆಂದು, ಇವರು ಕೂಲಿ ಕೆಲಸ ಮಾಡುವವರಾಗಿದ್ದು, ಪಾಲಿಕೆಯಿಂದ ಪರಿಹಾರ ನೀಡಲು ಕೋರಿರುತ್ತಾರೆ.

ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲನೆ ನಡೆಸಿದ್ದು, ಮತ್ತು ಕಾನೂನು ಕೋಶವು ಸಹ ಅಭಿಪ್ರಾಯ ನೀಡಿರುತ್ತದೆ ವರದಿ ಸಲ್ಲಿಸಿರುತ್ತಾರೆ. ಪೂಜ್ಯ ಮಹಾಪೌರರು ತಮ್ಮ ವರದಿಯಲ್ಲಿ ವೈದ್ಯಕೀಯ ವೆಚ್ಚ ರೂ.2,55,141–00 ಗಳನ್ನು ಸಂಬಂಧಪಟ್ಟವರಿಗೆ ಪಾವತಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ನಿರ್ಣಯಕ್ಕಾಗಿ ಕಡತ ಮಂಡಿಸಲು ಟಿಪ್ಪಣಿಯಲ್ಲಿ ತಿಳಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಶ್ರೀ.ಗೋವಿಂದ್ ನಾಯಕ್ ರವರ ಮಗನಾದ ಶ್ರೀ.ವಿಶಾಲ್ ರವರಿಗೆ ರಸ್ತೆ ಅಪಘಾತದಿಂದ ಕಾಲು ಕಳೆದುಕೊಂಡು ಅಂಗವಿಕಲನಾಗಿರುವುದರಿಂದ ಇವರಿಗೆ ಹಣಕಾಸಿನ ಪರಿಹಾರ ನೀಡಲು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಜಂಟಿ ಆಯುಕ್ತರು (ಆರೋಗ್ಯ) ರವರ ದಿನಾಂಕ: 03.02.2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## *13]. ವಿಷಯದ ಸಂಖ್ಯೆ: ತೆಆಸ್ಥಾಸ/135/2016–17*

**ಪ್ರಸ್ತಾವನೆ:** ಆಯುಕ್ತರ ಟಿಪ್ಪಣಿ ದಿನಾಂಕಃ 06.02.2017ರ ಪ್ರಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2016–17ನೇ ಸಾಲಿನ ಪರಿಷ್ಕೃತ ಆಯವ್ಯಯ ಮತ್ತು 2017–18ನೇ ಸಾಲಿನ ಕರಡು ಆಯವ್ಯಯ ಅಂದಾಜು ಪಟ್ಟಿಯ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***–ಚರ್ಚೆಗಾಗಿ ಮುಂದೂಡಿದೆ–***

## *14]. ವಿಷಯದ ಸಂಖ್ಯೆ: ತೆಆಸ್ಥಾಸ/136/2016–17*

ವಿಶೇಷ ಆಯುಕ್ತರು (ಆಸ್ತಿಗಳು) ರವರ ದಿನಾಂಕ: 23.11.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 2016–17ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿನಿಯರಿಗೆ ಪರೀಕ್ಷಾ ಶುಲ್ಕವನ್ನು ವಿದ್ಯಾರ್ಥಿನಿಯರ ಸಂಖ್ಯಾಬಲ ಮತ್ತು ವಿಭಾಗಗಳಿಗನುಗುಣವಾಗಿ ಶಾಲಾ/ಕಾಲೇಜಿಗಳಿಗೆ ಈ ಕೆಳಕಂಡಂತೆ ನಿಗಧಿಪಡಿಸಲಾಗಿದೆ.

1. ಎಸ್.ಎಸ್.ಎಲ್.ಸಿ.ಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಯರಿಗೆ ಪರೀಕ್ಷಾ ಶುಲ್ಕ ವಿನಾಯಿತಿ ನೀಡಲಾಗಿದ್ದು, ಇತರೇ ವರ್ಗದ ವಿದ್ಯಾರ್ಥಿನಿಯರಿಗೆ ಪರೀಕ್ಷಾ ಶುಲ್ಕ ರೂ.365/–ಗಳು.
2. ದ್ವಿತೀಯ ಪಿ.ಯು.ಸಿ. ತರಗತಿಯ ವಿದ್ಯಾರ್ಥಿನಿಯರಿಗೆ ಪರೀಕ್ಷಾ ಶುಲ್ಕ ವಿವರ ಪಟ್ಟಿ.

| ವಿಷಯ ಸಂಯೋಜನೆ | ಸಾಮಾನ್ಯ ವರ್ಗ | ಪರಿಶಿಷ್ಟ ಜಾತಿ/ಪಂಗಡ |
|---|---|---|
| ಕಲೆ ಮತ್ತು ವಾಣಿಜ್ಯ | 302 | 36 |
| ವಿಜ್ಞಾನ | 302+252 | 36 |
| ಗಣಕ ವಿಜ್ಞಾನ | 302+84 | 36 |

ವಿದ್ಯಾರ್ಥಿನಿಯರ ಸಂಖ್ಯಾ ಬಲಕ್ಕನುಗುಣವಾಗಿ ಪರೀಕ್ಷಾ ಶುಲ್ಕವನ್ನು ಕ್ರೂಢೀಕರಿಸಿ ಈ ಕೆಳಕಂಡಂತೆ ದಾಖಲಿಸಲಾಗಿದೆ. ವಿವರಗಳನ್ನು ಇದರೊಂದಿಗೆ ಲಗತ್ತಿಸಲಾಗಿದೆ.

| ಕ್ರ. ಸಂ. | ಶಾಲಾ ವರ್ಗ | ವಿದ್ಯಾರ್ಥಿನಿಯರ ಸಂಖ್ಯೆ: | | | ಪರೀಕ್ಷಾ ಶುಲ್ಕದ ಮೊತ್ತ ರೂ.ಗಳಲ್ಲಿ |
|---|---|---|---|---|---|
| | | ಪರಿಶಿಷ್ಟಜಾತಿ/ಪಂಗಡ | ಇತರೆ | ಒಟ್ಟು | |
| 1 | ಎಸ್.ಎಸ್.ಎಲ್.ಸಿ. | ವಿನಾಯಿತಿ | 808 | 808 | 2,94,920–00 |
| 2 | ದ್ವಿತೀಯ ಪಿ.ಯು.ಸಿ. | 645 | 1150 | 1795 | 3,98,262–00 |
| | | | | ಸಮಗ್ರ ಮೊತ್ತ | 6,93,182–00 |

**2016–17ನೇ ಸಾಲಿನಲ್ಲಿ ಶಾಲಾವಾರು ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆ ಶುಲ್ಕ ವಿವರ. (ವಿದ್ಯಾರ್ಥಿನಿಯರಿಗೆ)**

| ಕ್ರ.ಸಂ | ಪ್ರೌಢಶಾಲೆ ಹೆಸರು | ಪರೀಕ್ಷಾ ಶುಲ್ಕ | ವಿದ್ಯಾರ್ಥಿಗಳ ಸಂಖ್ಯೆ | ಒಟ್ಟು ಮೊತ್ತ ರೂ. |
|---|---|---|---|---|
| 1 | ಬೈರಸಂದ್ರ | 365 | 5 | 1825 |
| 2 | ಡಿಸ್ಪೆನ್ಸರಿರಸ್ತೆ | 365 | 36 | 13140 |

| | | | | |
|---|---|---|---|---|
| 3 | ಬ್ಯೆರವೇಶ್ವರನಗರ | 365 | 72 | 26280 |
| 4 | ಮಾಗಡಿರಸ್ತೆ | 365 | 36 | 13140 |
| 5 | ಆಸ್ಟಿನ್ ಟೌನ್(ಬಾಲಕಿಯರ) | 365 | 30 | 10950 |
| 6 | ಗಾಂಧೀನಗರ | 365 | 3 | 1095 |
| 7 | ಮತ್ತೀಕೆರೆ | 365 | 59 | 21535 |
| 8 | ಚಾಮರಾಜಪೇಟೆ | 365 | 11 | 4015 |
| 9 | ಕಾಕ್ಸ್‌ಟೌನ್ | 365 | 2 | 730 |
| 10 | ಜೋಗುಪಾಳ್ಯ(ಬಾಲಕಿಯರ) | 365 | 23 | 8395 |
| 11 | ಬಸವನಗುಡಿ | 365 | 5 | 1825 |
| 12 | ಕಸ್ತೂರ್ ಬಾ ನಗರ | 365 | 37 | 13505 |
| 13 | ಶ್ರೀರಾಮ ಪುರ(ಬಾಲಕಿಯರ) | 365 | 81 | 29565 |
| 14 | ಪಾದರಾಯನಪುರ | 365 | 139 | 50735 |
| 15 | ಕ್ಲೀವ್ ಲ್ಯಾಂಡ್‌ಟೌನ್ | 365 | 112 | 40880 |
| 16 | ಬನ್ನಪ್ಪ ಪಾರ್ಕ್ | 365 | 0 | 0 |
| 17 | ಕಾಟನ್ ಪೇಟೆ | 365 | 7 | 2555 |
| 18 | ಕೆ.ಜಿ.ನಗರ(ಬಾಲಕಿಯರ) | 365 | 8 | 2920 |
| 19 | ಕೋದಂಡರಾಮಪುರ | 365 | 4 | 1460 |
| 20 | ಮರ್ಫಿಟೌನ್ | 365 | 2 | 730 |
| 21 | ಪಿಳ್ಳಣ್ಣ ಗಾರ್ಡನ್ | 365 | 15 | 5475 |
| 22 | ಶಾಂತಿನಗರ | 365 | 3 | 1095 |
| 23 | ವಿಜಯನಗರ | 365 | 54 | 19710 |
| 24 | ಮಾರಪ್ಪನಪಾಳ್ಯ | 365 | 1 | 365 |
| 25 | ಹೇರೋಹಳ್ಳಿ | 365 | 20 | 7300 |
| 26 | ಜಯಮಹಲ್ | 365 | 24 | 8760 |
| 27 | ಗಂಗಾನಗರ | 365 | 18 | 6570 |
| 28 | ಬ್ರಾಡ್ ವೇ | 365 | 1 | 365 |
| 29 | ಪಿಟ್ ಕಾಲೋನಿ (ಬಾಲಕರ) | 0 | 0 | 0 |
| 30 | ಜೋಗುಪಾಳ್ಯ (ಬಾಲಕರ) | 0 | 0 | 0 |
| 31 | ಟಾಸ್ಕರ್‌ಟೌನ್ (ಬಾಲಕರ) | 0 | 0 | 0 |
| 32 | ಆಸ್ಟಿನ್ ಟೌನ್ (ಬಾಲಕರ) | 0 | 0 | 0 |
| 33 | ಪಿಟ್ ಕಾಲೋನಿ (ಬಾಲಕರ) | 0 | 0 | 0 |
| | ಒಟ್ಟು | 365 | 808 | 2,94,920–00 |

ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿನಿಯರಿಗೆ ಮಂಜೂರು ಮಾಡಬೇಕಾದ ಪರೀಕ್ಷಾ ಶುಲ್ಕದ ವಿವರ

| ಕ್ರ. ಸಂ. | ಕಿರಿಯ ಕಾಲೇಜಿನ ಹೆಸರು | ಎಸ್.ಸಿ/ಎಸ್.ಟಿ | | | | | ಇತರೆ ವರ್ಗ | | | | | |
|---|---|---|---|---|---|---|---|---|---|---|---|---|
| | | ವಿದ್ಯಾರ್ಥಿನಿಯರ ಸಂಖ್ಯೆ | ಓರ್ವ ವಿದ್ಯಾರ್ಥಿನಿಯರಿಗೆ | ವಿದ್ಯಾರ್ಥಿನಿಯರ ಸಂಖ್ಯೆ | ಓರ್ವ ವಿದ್ಯಾರ್ಥಿನಿಯರಿಗೆ | ಒಟ್ಟು | ವಿದ್ಯಾರ್ಥಿನಿಯರ ಸಂಖ್ಯೆ | ಓರ್ವ ವಿದ್ಯಾರ್ಥಿನಿಯರಿಗೆ | ವಿದ್ಯಾರ್ಥಿನಿಯರ ಸಂಖ್ಯೆ | ಓರ್ವ ವಿದ್ಯಾರ್ಥಿನಿಯರಿಗೆ | ಒಟ್ಟು ಮೊತ್ತ | ಸಮಗ್ರ ಮೊತ್ತ |
| 1 | ಸಿ.ಜೆ.ಸಿ. ಆಸ್ಟೀನ್ ಟೌನ್ | | | | | | | | | | | |
| | ಕಲಾ ಮತ್ತು ವಾಣಿಜ್ಯ | 45 | 36 | – | – | 1620 | 36 | 302 | – | – | 10872 | 12492 |
| 2 | ಸಿ.ಜೆ.ಸಿ. ಬನ್ನಪ್ಪ ಪಾರ್ಕ್ | | | | | | | | | | | |
| | ಕಲಾ ಮತ್ತು ವಾಣಿಜ್ಯ | 9 | 36 | – | – | 324 | 27 | 302 | – | – | 8154 | 8478 |
| 3 | ಸಿ.ಜೆ.ಸಿ. ಚಾಮರಾಜಪೇಟೆ | | | | | | | | | | | |
| | ಕಲಾ ಮತ್ತು ವಾಣಿಜ್ಯ | 15 | 36 | – | – | 540 | 25 | 302 | – | – | 7550 | 8090 |
| 4 | ಸಿ.ಜೆ.ಸಿ. ಕ್ಲೀವ್‌ಲ್ಯಾಂಡ್‌ಟೌನ್ | | | | | | | | | | | |
| | ಕಲಾ ಮತ್ತು ವಾಣಿಜ್ಯ | 89 | 36 | – | – | 3204 | 186 | 302 | – | | 56172 | 59376 |
| | ವಿಜ್ಞಾನ | 7 | 36 | – | – | 252 | 49 | – | 252 | 302 | 12348 | 27398 |
| | | – | – | – | – | – | | – | – | | 14798 | |

| | | | | | | | | | | | | |
|---|---|---|---|---|---|---|---|---|---|---|---|---|
| | ಒಟ್ಟು | 96 | – | – | – | – | 235 | – | – | – | 27146 | |
| 5 | ಸಿ.ಜೆ.ಸಿ. ಡಿಸ್ಪೆನ್ಸರಿರಸ್ತೆ | | | | | | | | | | | |
| | ಕಲಾ ಮತ್ತು ವಾಣಿಜ್ಯ | 59 | 36 | – | – | 2124 | 121 | 302 | – | | 36542 | 38666 |
| | ವಿಜ್ಞಾನ | 8 | 36 | – | – | 288 | 10 | | 252 | 302 | 2520 | 5828 |
| | | – | – | – | – | – | – | – | – | | 3020 | |
| | ಒಟ್ಟು | 67 | – | – | – | | 131 | 302 | – | 252 | 5540 | |
| 6 | ಸಿ.ಜೆ.ಸಿ. ಜೋಗುಪಾಳ್ಯ | | | | | | | | | | | |
| | ಕಲಾ ಮತ್ತು ವಾಣಿಜ್ಯ | 33 | 36 | – | – | 1188 | 33 | 302 | – | – | 9966 | 11154 |
| 7 | ಸಿ.ಜೆ.ಸಿ. ಕಸ್ತೂರಿಬಾನಗರ | | | | | | | | | | | |
| | ಕಲಾ ಮತ್ತು ವಾಣಿಜ್ಯ | 39 | 36 | – | – | 1404 | 69 | 302 | – | | 20838 | 22242 |
| | ವಿಜ್ಞಾನ | 4 | 36 | – | – | 144 | 20 | – | 252 | 302 | 5040 | 11224 |
| | | | | | | | | | | | 6040 | |
| | | | | | | | | | | | 11080 | |
| | ಗಣಕ ವಿಜ್ಞಾನ+ವಾಣಿಜ್ಯ | 4 | 36 | | – | 144 | 14 | 302 | 84 | | 4228 | 5548 |
| | ಒಟ್ಟು | 47 | – | – | – | | 103 | | | | 1176 | |
| | | | | | | | | | | | 5404 | |
| 8 | ಸಿ.ಜೆ.ಸಿ. ಮತ್ತೀಕೆರೆ | | | | | | | | | | | |
| | ಕಲಾ ಮತ್ತು ವಾಣಿಜ್ಯ | 91 | 36 | – | – | 3276 | 62 | 302 | – | – | 18724 | 22000 |
| 9 | ಸಿ.ಜೆ.ಸಿ. ಮಾಗಡಿರಸ್ತೆ | | | | | | | | | | | |
| | ಕಲಾ ಮತ್ತು ವಾಣಿಜ್ಯ | 31 | 36 | – | – | 1116 | 39 | 302 | | | 11778 | 12894 |
| | ವಿಜ್ಞಾನ | 1 | 36 | | | 36 | 6 | | 252 | 302 | 1512 | 3360 |
| | ಒಟ್ಟು | 32 | – | – | – | 504 | 45 | | | | 1812 | |
| | | | | | | 576 | | | | | 3324 | |
| 10 | ಸಿ.ಜೆ.ಸಿ. ಪಾದರಾಯನಪುರ | | | | | | | | | | | |
| | ಕಲಾ ಮತ್ತು ವಾಣಿಜ್ಯ | 24 | 36 | – | – | 864 | 139 | 302 | – | – | 41978 | 42842 |
| 11 | ಸಿ.ಜೆ.ಸಿ. ಭೈರವೇಶ್ವರ ನಗರ | | | | | | | | | | | |
| | ಕಲಾ ಮತ್ತು ವಾಣಿಜ್ಯ | 42 | 36 | – | – | 1512 | 108 | 302 | – | – | 32616 | 32724 |
| 12 | ಸಿ.ಜೆ.ಸಿ. ಟಾಸ್ಕರ್‌ಟೌನ್ (ಬಾಲಕರು) | | | | | | | | | | | |
| | ಕಲಾ ಮತ್ತು ವಾಣಿಜ್ಯ | – | – | – | – | – | – | – | – | – | – | – |
| 13 | ಸಿ.ಜೆ.ಸಿ. ಶ್ರೀರಾಮಪುರ | | | | | | | | | | | |
| | ಕಲಾ ಮತ್ತು ವಾಣಿಜ್ಯ | 68 | 36 | – | – | 2448 | 181 | 302 | – | – | 54662 | 57110 |
| | ವಿಜ್ಞಾನ | 6 | 36 | – | – | 216 | 30 | – | 252 | 302 | 7560 | 16836 |
| | ಒಟ್ಟು | 74 | – | – | – | 2664 | 211 | – | – | – | 9060 | |
| | | | | | | | | | | | 16620 | |
| | ಸಮಗ್ರ ಮೊತ್ತ | 575 | | | | | 1155 | | | | | 3,98,262 |

ಅದರಂತೆ 2016–17ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ.ಪರೀಕ್ಷೆಗೆ ಹಾಜರಾಗುತ್ತಿರುವ ಸಾಮಾನ್ಯ ವರ್ಗದ ವಿದ್ಯಾರ್ಥಿನಿಯರ ಸಂಖ್ಯೆ808 ಕ್ಕೆ ತಲಾರೂ.365.00ರಂತೆಒಟ್ಟು ರೂ.2,94,920–00 ಗಳು ಮತ್ತು ದ್ವಿತೀಯ ಪಿ.ಯು.ಸಿ. ಕಲಾ, ವಾಣಿಜ್ಯ ವಿಜ್ಞಾನ ವಿಭಾಗದಲ್ಲಿ ಪರೀಕ್ಷೆಗೆ ಹಾಜರಾಗುತ್ತಿರುವ ಪರಿಶಿಷ್ಟ ಜಾತಿ/ಪಂಗಡ ಮತ್ತು ಸಾಮಾನ್ಯ ವರ್ಗದ ವಿದ್ಯಾರ್ಥಿನಿಯರ ಸಂಖ್ಯೆಒಟ್ಟು1730 ಆಗಿದ್ದು, ಕ್ರಮವಾಗಿ ಮೊತ್ತರೂ. 3,98,262–00. ರಂತೆಒಟ್ಟು ಪರೀಕ್ಷಾ ಶುಲ್ಕ ರೂ. 6,93,182–00 ಗಳು ಆಗಿರುತ್ತದೆ.

2016–17ನೇ ಸಾಲಿನ ಆಯವ್ಯಯ 25 ಶಿಕ್ಷಣ, ಶೈಕ್ಷಣಿಕಅಭಿವೃದ್ಧಿ ಚಟುವಟಿಕೆಗಳು, ಇತರೆ ವೆಚ್ಚಗಳು, 10ನೇ ಮತ್ತು ದ್ವಿತೀಯ ಪಿ.ಯು.ಸಿ.ಯ ವಿದ್ಯಾರ್ಥಿನಿಯರಿಗೆ ಪರೀಕ್ಷಾ ಶುಲ್ಕ ವಿನಾಯಿತಿಗೆ (P1526) ಅನುದಾನವನ್ನು ನಿಗಧಿಪಡಿಸಿರುವುದಿಲ್ಲ.

ಆದುದರಿಂದ ಪ್ರಸಕ್ತ 2016–17ನೇ ಸಾಲಿನಲ್ಲಿರೂ. 6,93,182–00ಗಳ ಪರೀಕ್ಷಾ ಶುಲ್ಕಕ್ಕಾಗಿ 25 ಶಿಕ್ಷಣ, ಶೈಕ್ಷಣಿಕ ಅಭಿವೃದ್ಧಿ ಚಟುವಟಿಕೆಗಳು, ಕಿರಿಯ ಕಾಲೇಜು ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳು ಮತ್ತು ಅಧ್ಯಯನ ಪುಸ್ತಕಗಳು (ಪಿ–256) ಎಂಬ ಲೆಕ್ಕ ಶೀರ್ಷಿಕೆಯಲ್ಲಿ ನಿಗಧಿಪಡಿಸಿರುವ ಮೊತ್ತ ರೂ. 60.00 ಲಕ್ಷಗಳಲ್ಲಿ ಪುನರ್ವಿನಿಯೋಗಿಸಬಹುದಾಗಿದೆ.
ಪ್ರಸಕ್ತ 2016–17ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿನಿಯರ ಪರೀಕ್ಷಾ ಶುಲ್ಕ ರೂ.6,93,182–00 ಗಳನ್ನು 25 ಶಿಕ್ಷಣ, ಶೈಕ್ಷಣಿಕ ಅಭಿವೃದ್ಧಿ ಚಟುವಟಿಕೆಗಳು, ಕಿರಿಯ ಕಾಲೇಜು ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳು ಮತ್ತು ಅಧ್ಯಯನ ಪುಸ್ತಕಗಳು (ಪಿ–256) ಎಂಬ ಲೆಕ್ಕ ಶೀರ್ಷಿಕೆಯಲ್ಲಿ ನಿಗಧಿಪಡಿಸಿರುವ ಮೊತ್ತ ರೂ. 60.00 ಲಕ್ಷಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ಹಾಗೂ ಆಯಾ ಶಾಲಾ/ಕಾಲೇಜುಗಳಿಗೆ ಹಂಚಿಕೆ ಮಾಡಿರುವ ಪರೀಕ್ಷಾ ಶುಲ್ಕದ ಬಾಬ್ತನ್ನು ಶಾಲಾ/ಕಾಲೇಜುಗಳ ಜಂಟಿ ಖಾತೆಗೆ ಆರ್.ಟಿ.ಜಿ.ಎಸ್. ಮೂಲಕ ನೇರವಾಗಿ ನೀಡಲು ಅನುಮೋದನೆ ಕೋರಿ ಮಾನ್ಯ ಶಿಕ್ಷಣ ಸ್ಥಾಯಿ ಸಮಿತಿ ಅನುಮೋದನೆ ಕೋರಿ ಮಂಡಿಸಿರುವ ಟಿಪ್ಪಣಿ ಹಾಗೂ ಅನುಮೋದನೆಯ ನಂತರ ರೂ.6,93,182–00 ಗಳ ಮೊತ್ತವನ್ನು ಪುನರ್ವಿನಿಯೋಗಿಸಲು ಮಾನ್ಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಕೋರಿ ಮಂಡಿಸಲಾದ *ವಿಶೇಷ ಆಯುಕ್ತರು (ಆಸ್ತಿಗಳು) ರವರ ದಿನಾಂಕ: 23.11.2016ರ ಟಿಪ್ಪಣಿಯನ್ನು ಒಪ್ಪುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಕಡತ ಮಂಡಿಸಬಹುದೆಂದು ತೀರ್ಮಾನಿಸಿರುವ ಶಿಕ್ಷಣ ಸ್ಥಾಯಿ ಸಮಿತಿಯ ದಿನಾಂಕ: 03.02.2017ರ ಸಭೆಯ ನಿರ್ಣಯ.*

**ನಿರ್ಣಯ: ವಿಶೇಷ ಆಯುಕ್ತರು (ಆಸ್ತಿಗಳು) ರವರ ದಿನಾಂಕ: 23.11.216ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***15]. ವಿಷಯದ ಸಂಖ್ಯೆ: ತೆಆಸ್ಥಾಸ/137/2016–17***

ಆಯುಕ್ತರ ದಿನಾಂಕ: 07–12–2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತರವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿಗಳಿಗೆ ಕರ್ನಾಟಕದ ಪ್ರಖ್ಯಾತ ಸ್ಥಳಗಳಿಗೆ ಪ್ರವಾಸ ಮಾಡಲು ವಿಶೇಷವಾಗಿ ಪ್ಯಾಕೇಜನ್ನು ಈ ಕೆಳಕಂಡಂತೆ ನೀಡಿರುತ್ತಾರೆ.

ಸದರಿ ಪ್ರವಾಸದ ಪ್ಯಾಕೇಜ್ 1ಕ್ಕೆ ಅಂದರೆ ಎರಡು ರಾತ್ರಿ ಮೂರು ದಿವಸಗಳಿಗೆ (ಊಟ, ಉಪಹಾರಕ್ಕೆ, ಸಾರಿಗೆ, ವಸತಿ, ಸ್ಥಳಗಳ ಬಗ್ಗೆ ವಿವರಣೆ ನೀಡಲು ಗೈಡ್‌ಗಳ ವ್ಯವಸ್ಥೆ, ಸೇರಿದಂತೆ ತಲಾ ಒಬ್ಬ ವಿದ್ಯಾರ್ಥಿಗೆ ರೂ.3,850/–(ಮೂರು ಸಾವಿರದ ಎಂಟು ನೂರ ಐವತ್ತು ರೂ.ಗಳು ಮಾತ್ರ) ವೆಚ್ಚವಾಗುತ್ತದೆ.

ಸದರಿ ಪ್ರವಾಸಕ್ಕೆ ಒಟ್ಟು 4,358 ವಿದ್ಯಾರ್ಥಿ/ವಿದ್ಯಾರ್ಥಿನಿಯರು ಇದ್ದು 4,358*3,850=1,67,78,300/– (ಒಂದುಕೋಟಿ ಆರವತ್ತೇಳು ಲಕ್ಷದ ಎಪ್ಪತ್ತೆಂಟು ಸಾವಿರದ ಮೂರುನೂರು ರೂಪಾಯಿಗಳು) ವೆಚ್ಚವಾಗುತ್ತದೆ, ಸದರಿ ವೆಚ್ಚವನ್ನು ಬರಿಸಲು 2016–17ನೇ ಸಾಲಿನ ಆಯ–ವ್ಯಯ ಲೆಕ್ಕ ಶೀರ್ಷಿಕೆ 25 ಶಿಕ್ಷಣ, ಆಡಳಿತಾತ್ಮಕ ವೆಚ್ಚಗಳು, ವಿದ್ಯಾರ್ಥಿ/ವಿದ್ಯಾರ್ಥಿನಿಯರ ಶೈಕ್ಷಣಿಕ ಪ್ರವಾಸ ಪಿ1590ರಲ್ಲಿ ರೂ.1ಕೋಟಿ ಅನುದಾನ ಲಭ್ಯವಿರುತ್ತದೆ. ಉಳಿಕೆ ಮೊತ್ತ ರೂ.67,78,300/– ಕೊರತೆಇದ್ದು, ಸದರಿ ಮೊತ್ತವನ್ನು 2016–17ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 24 ಸಂಸ್ಕೃತಿ ಮತ್ತು ಕ್ರೀಡೆ, ಆಡಳಿತಾತ್ಮಕ ವೆಚ್ಚಗಳು, ಕ್ರೀಡೆ

ಅಭಿವೃದ್ಧಿ ಚಟುವಟಿಕೆಗಳು ಆಟದ ಉಪಕರಣ ನಿರ್ವಹಣೆ ಮತ್ತು ದುರಸ್ತಿ ಕಾರ್ಯಕ್ಕೆ ಪಿ0247ರಲ್ಲಿ ರೂ.1ಕೋಟಿ ಮೀಸಲಿಟ್ಟಿರುವ ಅನುದಾನ ಲಭ್ಯವಿದ್ದು, ಸದರಿ ಮೊತ್ತದಲ್ಲಿ ರೂ.67,78,300/-ಗಳನ್ನು ಪುನರ್‌ವಿನಿಯೋಗ (RE-APPROPRIATION) ಪಡಿಸಿಕೊಳ್ಳುವ ಬಗ್ಗೆ ಶಿಕ್ಷಣ ಸ್ಥಾಯಿ ಸಮಿತಿ, ತೆರಿಗೆ ಮತ್ತುಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ***ಆಯುಕ್ತರರವರ ದಿನಾಂಕ:07.12.2016ರ ಟಿಪ್ಪಣಿಯ ಬಗ್ಗೆ ಚರ್ಚಿಸಲಾಗಿ ಈಗಾಗಲೇ ಫೆಬ್ರವರಿ ಮಾಹೆಯು ಚಾಲ್ತಿಯಲ್ಲಿದ್ದು, ಪರೀಕ್ಷೆಗಳು ಸಮೀಪಿಸುತ್ತಿರುವುದರಿಂದ, ಪ್ರವಾಸಕ್ಕೆ ಕಳುಹಿಸುವುದು ಸೂಕ್ತವಾಗಿರುವುದಿಲ್ಲ. ಆದ್ದರಿಂದ 2016-17ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 25ರಲ್ಲಿನ ರೂ.1.00 ಕೋಟಿ ಅನುದಾನ ಹಾಗೂ ಲೆಕ್ಕಶೀರ್ಷಿಕೆ 24ರಲ್ಲಿನ ರೂ.1.00 ಕೋಟಿ ಅನುದಾನ ಒಟ್ಟು ರೂ.2.00 ಕೋಟಿ ಅನುದಾನವನ್ನು, ಸಮಿತಿಯ ಸದಸ್ಯರ ವಾರ್ಡ್‌ಗಳಲ್ಲಿನ ಬಿ.ಬಿ.ಎಂ.ಪಿ. ಶಾಲೆಗಳಿಗೆ ಅವಶ್ಯಕವಿರುವ ದುರಸ್ಥಿ, ನಿರ್ವಹಣೆ, ಶಾಲೆಗಳಿಲ್ಲದ ಕಡೆ ಶಿಶುವಿಹಾರ/ಶಾಲೆ ನಿರ್ಮಾಣಕ್ಕಾಗಿ ಸದರಿ ಅನುದಾನ ಉಪಯೋಗಿಸಿಕೊಳ್ಳಲು ತೀರ್ಮಾನಿಸಿ, ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ತೀರ್ಮಾನಿಸಿರುವ ಶಿಕ್ಷಣ ಸ್ಥಾಯಿ ಸಮಿತಿಯ ದಿನಾಂಕ: 03.02.2017ರ ಸಭೆಯ ನಿರ್ಣಯ.***

**ನಿರ್ಣಯ: ಆಯುಕ್ತರ ದಿನಾಂಕ: 07.12.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***16]. ವಿಷಯದ ಸಂಖ್ಯೆ: ತೆಆಸ್ಥಾಸ/138/2016-17***

ಆಯುಕ್ತರ ಟಿಪ್ಪಣಿ ದಿನಾಂಕ: 02.02.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸರ್ಕಾರದ ಶಿಕ್ಷಣ ಇಲಾಖೆಯ ಆದೇಶದಲ್ಲಿ ಸರ್ಕಾರಿ / ಅನುದಾನಿತ ಪ್ರೌಢಶಾಲಾ ಶಿಕ್ಷಕರುಗಳಿಗೆ ಮತ್ತು ಮುಖ್ಯ ಶಿಕ್ಷಕರುಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ವಿಸ್ತರಿಸಲಾಗಿರುತ್ತದೆ.

1. ಜೂನ್-2016 ರಂದು ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ / ಅನುದಾನಿತ ಪ್ರೌಢಶಾಲಾ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರುಗಳಿಗೆ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡಲಾಗಿದೆ.
2. ದಿನಾಂಕ: 01-08-2008ರ ಪೂರ್ವದಲ್ಲಿ ಸರ್ಕಾರಿ / ಅನುದಾನಿತ ಪ್ರೌಢಶಾಲೆಯಲ್ಲಿ ನೇಮಕಾತಿಗೊಂಡು ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳಿಗೆ ನೀಡಲಾಗುತ್ತಿರುವ ರೂ. 400-00 ಗಳ ವಿಶೇಷ ಭತ್ಯೆಯನ್ನು ಮುಂದುವರೆಸಲಾಗಿದೆ.
3. ತಮ್ಮ ವೇತನ ಶ್ರೇಣಿ ಅಂತಿಮ ಹಂತವನ್ನು ತಲುಪಿರುವ ಮುಖ್ಯ ಶಿಕ್ಷಕರು ಮತ್ತು ಪ್ರೌಢಶಾಲಾ ಶಿಕ್ಷಕರುಗಳು ಮೇಲಿನಂತೆ ಮಂಜೂರು ಮಾಡಿರುವ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ಪಡೆಯಲು ಅರ್ಹರಾಗಿರುತ್ತಾರೆ.
4. ಮೇಲಿನ ಸೌಲಭ್ಯಗಳು ದಿನಾಂಕ: 01-06-2016 ರಿಂದ ಅಂದರೆ, 2016ರ ಜೂನ್ ತಿಂಗಳ ವೇತನದಿಂದ ಜಾರಿಗೆ ಬರುತ್ತದೆ.
5. ಆರ್ಥಿಕ ಹೊರೆಯನ್ನು ಒಳಗೊಂಡಿರದ ಸಂಘದ ಇತರ ಬೇಡಿಕೆಗಳನ್ನು ಶಿಕ್ಷಣ ಇಲಾಖೆಯು ಪರಿಶೀಲಿಸಲಿದೆ.
6. ಆರ್ಥಿಕ ಹೊರೆಯನ್ನು ಒಳಗೊಂಡಿರುವ ಸಂಘದ ಬೇಡಿಕೆಗಳನ್ನು ಮುಂದಿನ ವೇತನ ಸಮಿತಿ / ವೇತನ ಆಯೋಗದ ಮುಂದೆ ಮಂಡಿಸಲಾಗುವುದು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಒಟ್ಟು 16 ಮಂದಿ ಮುಖ್ಯೋಪಾಧ್ಯಾಯರುಗಳು ಮತ್ತು 69 ಮಂದಿ ಪ್ರೌಢಶಾಲಾ ಸಹ ಶಿಕ್ಷಕರುಗಳು ಕಾರ್ಯನಿರ್ವಹಿಸುತ್ತಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 78 ಎಸ್‌ಎಲ್‌ಬಿ 2016, ದಿನಾಂಕ: 15-04-2016 ರಂತೆ ಮುಖ್ಯೋಪಾಧ್ಯಾಯರು ಮತ್ತು ಪ್ರೌಢಶಾಲಾ ಸಹ ಶಿಕ್ಷಕರುಗಳಿಗೆ ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡಿದ್ದಲ್ಲಿ ತಗಲುವ ವೆಚ್ಚ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಮುಖ್ಯೋಪಾಧ್ಯಾಯರಿಗೆ ಮತ್ತು ಪ್ರೌಢಶಾಲಾ ಸಹ ಶಿಕ್ಷಕರಿಗೆ ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡಿದರೆ ತಗಲುವ ಅಂದಾಜು ವೆಚ್ಚ ರೂ. 12,80,961-00 ಆಗುತ್ತದೆ. {ಮುಖ್ಯೋಪಾಧ್ಯಾಯರು ಮತ್ತು ಪ್ರೌಢಶಾಲಾ ಶಿಕ್ಷಕರ ಮೂಲ ವೇತನವು ವ್ಯತ್ಯಾಸವಾಗಿರುವುದರಿಂದ ಸರಾಸರಿ ಆಧಾರದ ಲೆಕ್ಕಾಚಾರ ಮಾಡಲಾಗಿದೆ.}

ಒಬ್ಬ ಮುಖ್ಯೋಪಾಧ್ಯಾಯರಿಗೆ ಒಂದು ತಿಂಗಳಿಗೆ ಸರಾಸರಿ ಹೆಚ್ಚುವರಿ ಮೂಲ ವೇತನ ರೂ. 900-00 + 362-25 {40.25% ತುಟ್ಟಿಭತ್ಯೆ} + 270 {30% ಮನೆ ಬಾಡಿಗೆ ಭತ್ಯೆ} = ರೂ. 1532.25 ಗಳಾಗುತ್ತದೆ. ಒಂದು ವರ್ಷಕ್ಕೆ ರೂ. 1532.25 * 12 = 18,387-00 ಗಳಾಗುತ್ತಿದೆ. ಒಟ್ಟು 16 ಮಂದಿ ಮುಖ್ಯೋಪಾಧ್ಯಾಯರುಗಳಿ+ಗೆ ಒಂದು ವರ್ಷಕ್ಕೆ ರೂ. 18,387-00 * 16 = 2,94,192-00 ಗಳಾಗುತ್ತದೆ.

